2016 ಕ.ತೀ.ವ 1185

(ಕಲುಬುರಗಿ ನ್ಯಾಯಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ

ಚಾಂದ್‌ಪಾಷಾ -ವಿರುದ್ಧ- ಕರ್ನಾಟಕ ರಾಜ್ಯ (ಪೋಲೀಸ್ ಉಪ ನಿರೀಕ್ಷಕರು), ಅಬಕಾರಿ ಪಿ.ಎಸ್., ಯಾದಗಿರ್*

ನಿದ್ರಾಜನಕ ಮತ್ತು ಮನಸ್ಸಿನ ಮೇಲೆ ಪರಿಣಾಮ ಬೀರುವ ವಸ್ತುಗಳ ಅಧಿನಿಯಮ, 1985ರ 8 ಮತ್ತು 12ನೇ ಪ್ರಕರಣಗಳ ಮೇರೆಗಿನ ಅರ್ಜಿ.

ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು, ಯಾದಗಿರಿ ನ್ಯಾಯಾಲಯದ ಕಡತದಲ್ಲಿ ಇತ್ಯರ್ಥದಲ್ಲಿದ್ದ ವಿಶೇಷ ಮೊಕದ್ದಮೆ ಸಂ.01/2011ನ್ನು ಹೊಂದಿರುವ ಕ್ರಿಮಿನಲ್ ಪ್ರಕರಣದ ಮೊದಲ ಆಪಾದಿತನು, ದಂಡ ಪ್ರಕ್ರಿಯಾ ಸಂಹಿತೆಯ 374(2)ರ ಪ್ರಕರಣದ ಮೇರೆಗೆ ಈ ಅಪೀಲನ್ನು ಹೂಡಿದ್ದಾನೆ. ಸದರಿ ಅಧಿನಿಯಮ, 1995ರ 20ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಎನ್.ಡಿ.ಪಿ.ಎಸ್.ನ 8ನೇ ಪ್ರಕರಣದ ಮೇರೆಗೆ ಆಪಾದಿತನನ್ನು ಅಪರಾಧದ ತಪ್ಪಿತಸ್ಥನೆಂದು ಗುರುತಿಸಲಾಗಿದೆ. ಅವನನ್ನು 10 ವರ್ಷಗಳ ಕಠಿಣ ಕಾರಾವಾಸ ಮತ್ತು ದಿನಾಂಕ 25.07.2011ರ ಪ್ರಕಾರ 1.00 ಲಕ್ಷ ರೂ.ಗಳ ಜುಲ್ಮಾನೆಯ ಶಿಕ್ಷೆಗೊಳಪಡಿಸಲಾಗಿದೆ.ದಿನಾಂಕ 22.07.2011ರ ಅಪರಾಧ ನಿರ್ಣಯ ತೀರ್ಪು ಮತ್ತು 25.07.2011ರ ಕಾರಾವಾಸ ಶಿಕ್ಷೆಯನ್ನು ಈ ನ್ಯಾಯಾಲಯದ ಮುಂದೆ ಪ್ರಶ್ನಿಸಲಾಗಿದೆ.

ಸಾಮಾನ್ಯವಾಗಿ, ಎನ್‌ಡಿಪಿಎಸ್ ಅಧಿನಿಯಮದ ಮೇರೆಗೆ ದಾಳಿ ನಡೆಸಿದ ಅಧಿಕಾರಿಯು, ದಾಳಿ/ಶೋಧನೆಯನ್ನು ನಡೆಸಲು ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಧೀಶರಿಂದ ಶೋಧನಾ ವಾರಂಟನ್ನು ಪಡೆದುಕೊಳ್ಳಬೇಕು ಮತ್ತು ಅಧಿನಿಯಮದ 42(1)ನೇ ಪ್ರಕರಣದ ಎರಡನೇ ಪರಂತುಕವು, ವಾರಂಟು ಅಥವಾ ಅನುಜ್ಞೆಯಿಲ್ಲದೆ ದಾಳಿ ಮಾಡುವ ಅಧಿಕಾರಿಯು ಆವರಣವನ್ನು ಪ್ರವೇಶಿಸುವುದನ್ನು ಮತ್ತು ಶೋಧನೆಯನ್ನು

*ಕ್ರಿಮಿನಲ್ ಅಪೀಲು ಸಂ. 3636/2011, ದಿನಾಂಕ: 6ನೇ ಆಗಸ್ಟ್, 2015.

ನಡೆಸುವುದನ್ನು ಸಮರ್ಥಿಸುತ್ತದೆ. ಆದರೆ, ಅಧಿನಿಯಮದ 42ನೇ ಪ್ರಕರಣದ (2)ನೇ ಉಪ-ಪ್ರಕರಣವು, ಯಾರೇ ಅಧಿಕಾರಿಯು (1)ನೇ ಉಪ-ಪ್ರಕರಣದ ಮೇರೆಗೆ ಲಿಖಿತದಲ್ಲಿ ಮಾಹಿತಿಯನ್ನು ಪಡೆದುಕೊಂಡಾಗ ಅಥವಾ ಅದರ ಪರಂತುಕದ ಮೇರೆಗೆ ತನ್ನ ನಂಬಿಕೆಯಂತೆ ಆಧಾರಗಳನ್ನು ದಾಖಲಿಸಿಕೊಂಡಾಗ ಅವನು, 72 ಗಂಟೆಗಳೊಳಗೆ ಅದರ ಪ್ರತಿಯನ್ನು ಆತನ ನಿಕಟ ಹಿರಿಯ ವರಿಷ್ಠ ಅಧಿಕಾರಿಗೆ ಕಳುಹಿಸುವುದನ್ನು ಆಜ್ಞಾಪಿಸುತ್ತದೆ. ಅಧಿಕಾರಿಯು ನಿರೀಕ್ಷಕ ದರ್ಜೆಗಿಂತ ಕಡಿಮೆ ದರ್ಜೆಯವರಾಗಿರದಿದ್ದರೆ, ಪೊಲೀಸು ಠಾಣೆಯಲ್ಲಿರುವಾಗ ಯಾವುದೇ ಮಾಹಿತಿಯನ್ನು ಸ್ವೀಕರಿಸಿದರೆ, ಅವನು ಇದನ್ನು ಲಿಖಿತದಲ್ಲಿ ದಾಖಲಿಸುವುದು ಮತ್ತು ಅನುಚಿತ ವಿಳಂಬ ಮಾಡದೆ ತಮ್ಮ ನಿಕಟ ವರಿಷ್ಠಾಧಿಕಾರಿಗೆ 72 ಗಂಟೆಗಳೊಳಗೆ ಸೂಚಿಸಿರುವುದನ್ನು ತಿಳಿಸತಕ್ಕದ್ದು.ಆದರೆ ಸದರಿ ಪ್ರಕರಣದಲ್ಲಿ ಇವ್ಯಾವುದನ್ನು ಪಾಲಿಸಿರುವುದಿಲ್ಲ.

ಗಂಭೀರವಾದ ಕಾನೂನು ದೌರ್ಬಲ್ಯಗಳ ಮತ್ತು ವಾಸ್ತವಿಕ ಅಸಂಗತತೆಗಳ ಹಿನ್ನೆಲೆಯಲ್ಲಿ ಪ್ರಾಸಿಕ್ಯೂಷನ್ನು, ಎಲ್ಲಾ ಸಂಶಯಗಳನ್ನು ಮೀರಿ ಆಪಾದಿತನ ಅಪರಾಧವನ್ನು ರುಜುವಾತುಪಡಿಸಲು ಸಾಧ್ಯವಾಗಿಲ್ಲವೆಂಬುದನ್ನು ತೋರಿಸುವುದು ಸಾಕಾಗುತ್ತದೆ.ತದನುಸಾರವಾಗಿ ವಿವಾದಾಂಶ ಸಂ.1ಕ್ಕೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ. ಈ ವಿಷಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಅಪೀಲನ್ನು ಅಂಗೀಕರಿಸಬೇಕಾಗುತ್ತದೆ ಮತ್ತು ಅಪರಾಧ ನಿರ್ಣಯದ ತೀರ್ಪು ಮತ್ತು ಶಿಕ್ಷೆಯನ್ನು ವಿಧಿಸುವುದನ್ನು ತಳ್ಳಿಹಾಕಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು, ಸದರಿ ಅಪೀಲನ್ನು ಎತ್ತಿ ಹಿಡಿದಿದೆ.

ಕ್ರಿಮಿನಲ್ ಅಪೀಲನ್ನು ಪುರಸ್ಕರಿಸಲಾಗಿದೆ.

*ಉಲ್ಲೇಖಿಸಲಾದ ಮೊಕದ್ದಮೆ* *ಪ್ಯಾರಾದಲ್ಲಿ*

1. *2013(1) ಎಸ್‌ಸಿಸಿ (ಕ್ರಿ) 933*
   *ಸುಖ್‌ದೇವ್ ಸಿಂಗ್ -ವಿರುದ್ಧ- ಹರಿಯಾಣ ರಾಜ್ಯ (ಉಲ್ಲ) 12*
2. *[2009] 8 ಎಸ್‌ಸಿಸಿ 539)*
   *ಕರ್ನೈಲ್ ಸಿಂಗ್ -ವಿರುದ್ಧ- ಹರಿಯಾಣ ರಾಜ್ಯ (ಉಲ್ಲೇ) 13*

ಅಪೀಲುದಾರರ ಪರ: ಶ್ರೀ ಬಾಬುರಾವ್ ಮಂಗಾನೆ ವಕೀಲರ ಪರವಾಗಿ;
ಶ್ರೀ ಅಶೋಕ್ ಬಿ. ಮುಳಗೆ, ವಕೀಲರು;
ಪ್ರತ್ಯಪೀಲುದಾರರ ಪರ: ಶ್ರೀ ಆರ್.ಎಸ್. ಪಾಟೀಲ್, ಸರ್ಕಾರಿ ವಕೀಲರು.

**ತೀರ್ಪು**

**ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ:**

ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು, ಯಾದಗಿರಿ ನ್ಯಾಯಾಲಯದ ಕಡತದಲ್ಲಿ ಇತ್ಯರ್ಥದಲ್ಲಿದ್ದ ವಿಶೇಷ ಮೊಕದ್ದಮೆ ಸಂ.01/2011ನ್ನು ಹೊಂದಿರುವ ಕ್ರಿಮಿನಲ್ ಪ್ರಕರಣದ ಮೊದಲ ಆಪಾದಿತನು, ದಂಡ ಪ್ರಕ್ರಿಯಾ ಸಂಹಿತೆಯ 374(2)ರ ಪ್ರಕರಣದ ಮೇರೆಗೆ ಈ ಅಪೀಲನ್ನು ಹೂಡಿದ್ದಾನೆ. ಸದರಿ ಅಧಿನಿಯಮ, 1995ರ 20ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಎನ್.ಡಿ.ಪಿ.ಎಸ್.ನ 8ನೇ ಪ್ರಕರಣದ ಮೇರೆಗೆ ಆಪಾದಿತನನ್ನು ಅಪರಾಧದ ತಪ್ಪಿತಸ್ಥನೆಂದು ಗುರುತಿಸಲಾಗಿದೆ. ಅವನನ್ನು 10 ವರ್ಷಗಳ ಕಠಿಣ ಕಾರಾವಾಸ ಮತ್ತು ದಿನಾಂಕ 25.07.2011ರ ಪ್ರಕಾರ 1.00 ಲಕ್ಷ ರೂ.ಗಳ ಜುಲ್ಮಾನೆಯ ಶಿಕ್ಷೆಗೊಳಪಡಿಸಲಾಗಿದೆ. ದಿನಾಂಕ 22.07.2011ರ ಅಪರಾಧ ನಿರ್ಣಯ ತೀರ್ಪು ಮತ್ತು 25.07.2011ರ ಕಾರಾವಾಸ ಶಿಕ್ಷೆಯನ್ನು ಈ ನ್ಯಾಯಾಲಯದ ಮುಂದೆ ಪ್ರಶ್ನಿಸಲಾಗಿದೆ.

2. ಈ ಮೊಕದ್ದಮೆ ಹೂಡಲು ಕಾರಣವಾದ ಸಂಗತಿಗಳು ಈ ಮುಂದಿನಂತಿವೆ: ದಿನಾಂಕ 11.10.2010ರಂದು ಸಾಯಂಕಾಲ ಸುಮಾರು 5.30ರಲ್ಲಿ ನಂಬಲರ್ಹವಾದ ಮಾಹಿತಿಯನ್ನು ಸ್ವೀಕರಿಸಿದ ನಂತರ, ಪ್ರಾ.ಸಾ.1 ಅಬಕಾರಿ ನಿರೀಕ್ಷಕರು ಷಹಾಪುರ ಇವರು ಅಬಕಾರಿ ಆಯುಕ್ತರು ಗುಲ್ಬರ್ಗಾ ಮತ್ತು ಇವರ ಸಿಬ್ಬಂದಿ ಮತ್ತು ಇಬ್ಬರು ಪಂಚರು, ವಿದ್ಯಾನಗರದ ಷಹಾಪುರದಲ್ಲಿರುವ ಆಪಾದಿತ ಸಂ.2/ಮಹಮದ್ ಸಾಬ್‌ರ ಮನೆಯನ್ನು ಶೋಧಿಸಿದ್ದಾರೆ.ಸದರಿ ದಾಳಿಯನ್ನು ನಡೆಸಿದ ಸಮಯದಲ್ಲಿ ಮೊದಲನೆ ಆಪಾದಿತನು ಎರಡನೇ ಆಪಾದಿತನ ಮನೆಯಲ್ಲಿ ವಾಸವಾಗಿರುವುದನ್ನು ತಿಳಿಸಿದ್ದನು.ಆಪಾದಿತ ಸಂ.1 ಮನೆಯಲ್ಲೇ ಇದ್ದನೆಂದು ಮತ್ತು ಅವನ ಮನೆಯನ್ನು

ಶೋಧಿಸಿದ ನಂತರ ಅವನು ಎಲ್ಲಾ 13 ಕಿ.ಗ್ರಾಂ.ಗಳಷ್ಟು ಗಾಂಜಾ ಇದ್ದ 4 ಪ್ಲಾಸ್ಟಿಕ್ ಬ್ಯಾಗುಗಳನ್ನು ಇಟ್ಟುಕೊಂಡಿರುವುದು ಕಂಡುಬಂದಿತ್ತು.ಒಂದು ಬ್ಯಾಗ್‌ನಲ್ಲಿ 4 ಕಿ.ಗ್ರಾಂ.ಗಳಷ್ಟು ಗಾಂಜಾ ಇದ್ದು, ಉಳಿದ ಮೂರು ಬ್ಯಾಗುಗಳಲ್ಲಿ ಪ್ರತಿಯೊಂದರಲ್ಲು 3 ಕಿ.ಗ್ರಾಂ ನಷ್ಟು ಗಾಂಜಾವನ್ನು ಒಳಗೊಂಡಿದ್ದು ಅವುಗಳನ್ನು ತೂಕದ ಸಾಧನದ ಸಹಾಯದಿಂದ ತೂಕ ಮಾಡಲಾಯಿತು.ಸ್ವತಂತ್ರ ಪಂಚರು ಮತ್ತು ಅಬಕಾರಿ ಆಯುಕ್ತರ ಸಮ್ಮುಖದಲ್ಲಿ ಮಹಜರಿನ ಮೇರೆಗೆ ಮೇಲೆ ಆರೋಪಿಸಲಾದ ವಸ್ತುಗಳನ್ನು ಅಬಕಾರಿ ನಿರೀಕ್ಷಕರು ವಶಪಡಿಸಿಕೊಂಡಿದ್ದಾರೆ.ಅವರ ಇಬ್ಬರು ಸಿಬ್ಬಂದಿ ಪ್ರತಿಯೊಂದು 4 ಬ್ಯಾಗುಗಳಿಂದ 100 ಗ್ರಾಂ ಗಳಷ್ಟು ಗಾಂಜಾವನ್ನು ಪಡೆದುಕೊಂಡಿದ್ದಾರೆ ಮತ್ತು ಅವರ ಸಹಿ ಮತ್ತು ಪಂಚರ ಸಹಿಗಳಿರುವ ಚೀಟಿಯನ್ನು ನಾಲ್ಕು ಪೊಟ್ಟಣಗಳ ಮೇಲೆ ಪ್ರತ್ಯೇಕವಾಗಿ ಅಂಟಿಸಲಾಯಿತು.

3. ಆಪಾದಿತನನ್ನು ಬಂಧಿಸಿ ಪೋಲೀಸು ಠಾಣೆಗೆ ಕರೆದೊಯ್ದ ನಂತರ, ಅವನ ಪ್ರಕರಣದ ವರದಿಯ ಆಧಾರದ ಮೇಲೆ ಅಧಿನಿಯಮದ 20ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಗಳಿಗಾಗಿ ಅಪರಾಧ ಸಂ.1/2010ರಲ್ಲಿ ಪ್ರಕರಣವನ್ನು ದಾಖಲಿಸಲಾಗಿತ್ತು. ಆಪಾದಿತ ಸಂ.2, ಮನೆಯ ಮಾಲೀಕನೆಂದು ಹೇಳಲಾಗಿದೆ.

4. ಅಬಕಾರಿ ನಿರೀಕ್ಷಕರು ವಶಪಡಿಸಿಕೊಳ್ಳಲಾದ ಮಾದರಿಯನ್ನು ರಾಸಾಯನಿಕ ಪರೀಕ್ಷೆಗಾಗಿ ಬೆಂಗಳೂರಿಗೆ ಕಳಿಸಲಾಯಿತು ಮತ್ತು ಇದಾದ ನಂತರ ಪ್ರಾ.ಸಾ.4 ಅನಿಲ್‌ಕುಮಾರ್‌ನ ಪ್ರಕರಣವನ್ನು ಹೆಚ್ಚು ತನಿಖೆ ನಡೆಸಲು ವಶಕ್ಕೆ ತೆಗೆದುಕೊಂಡು ಮನೆಯ ದಾಖಲೆಗಳನ್ನು ವಶಪಡಿಸಿಕೊಳ್ಳಲಾಯಿತು ಇದರಲ್ಲಿ ಮೊದಲನೇ ಆಪಾದಿತನು ವಾಸಿಸುತ್ತಿದ್ದನು. ತನಿಖೆಯನ್ನು ಪೂರ್ಣಗೊಳಿಸಿದ ನಂತರ ಇಬ್ಬರೂ ಆರೋಪಿಗಳ ವಿರುದ್ಧ ಆರೋಪಪಟ್ಟಿಯನ್ನು ಸಲ್ಲಿಸಲಾಗಿತ್ತು.

5. ದಿನಾಂಕ 23.03.2011ರಂದು ಆಪಾದಿತನ ವಿರುದ್ಧ ಶುಲ್ಕಗಳನ್ನು ವಿಧಿಸಲಾಗಿತ್ತು. ಅವರು ಅಪರಾಧದ ತಪ್ಪಿತಸ್ಥರಲ್ಲವೆಂದು ವಾದಿಸಿದ್ದರು ಮತ್ತು ಅಧಿವಿಚಾರಣೆಗೆ ಕ್ಲೇಮು ಮಾಡಿದ್ದರು.ಆಪಾದಿತನ ದೋಷವನ್ನು ರುಜುವಾತುಪಡಿಸುವ

ಸಲುವಾಗಿ, ಪ್ರಾಸಿಕ್ಯೂಷನ್ನು ಎಲ್ಲಾ ಆರು ಜನ ಸಾಕ್ಷಿದಾರರನ್ನು ಪ್ರಾ.ಸಾ.6 ಪತ್ರಾಂಕಿತ ಅಧಿಕಾರಿಯನ್ನು ಪ್ರತ್ಯೇಕವಾಗಿ ಪರಿಶೀಲಿಸಿದೆ.ಪ್ರಾ.ಸಾ.2/ಇಬ್ರಾಹಿಂ ಮತ್ತು ಪ್ರಾ.ಸಾ.3/ರಮೇಶ್ ಇವರನ್ನು ಪ್ರತ್ಯೇಕ ಪಂಚರೆಂದು ತಿಳಿಸಲಾಗಿದೆ ಮತ್ತು ಯಾವುದೇ ರೀತಿಯಲ್ಲಿ ಪ್ರಾಸಿಕ್ಯೂಷನ್‌ನ ಪ್ರಕರಣವನ್ನು ಸಮರ್ಥಿಸಿಲ್ಲ. ಪ್ರಾ.ಸಾ.4, 5 ಮತ್ತು 6 ಪ್ರಾಸಿಕ್ಯೂಷನ್‌ನ ಪ್ರಕರಣವನ್ನು ಸಮರ್ಥಿಸಿದ್ದಾರೆ.ಎಲ್ಲಾ 7 ನಿಶಾನೆಗಳನ್ನು ಒಂದು ಶೋಧಕ ವಾರಂಟನ್ನು ಪ್ರತ್ಯೇಕವಾಗಿ ಗುರುತು ಮಾಡಲಾಗಿದೆ.ನಿಶಾನೆ ಪಿ1ನ್ನು, ಆಪಾದಿತ ಸಂ.2ರ ಮನೆಯಲ್ಲಿ ಸಿದ್ಧಪಡಿಸಲಾಗಿದೆ ಎಂದು ಹೇಳಲಾಗಿದೆ.ಎಲ್ಲಾ 12 ಮುಖ್ಯ ಅಂಶಗಳನ್ನು ಗುರುತು ಮಾಡಲಾಗಿದೆ.ಆಪಾದಿತನ ವಾದವು ಅವರ ವಿರುದ್ಧ ಮಾಡಲಾದ ಆಪಾದನೆಗಳನ್ನು ಒಟ್ಟಾರೆಯಾಗಿ ನಿರಾಕರಿಸಿರುವ ಅಂಶಗಳಲ್ಲೊಂದಾಗಿದೆ.

6. ಅಪೀಲುದಾರರ ಪರವಾಗಿ ಹಾಜರಾದ ಮಾನ್ಯ ವಕೀಲರು ಮತ್ತು ಎದುರುದಾರರ ಪರವಾಗಿ ಹಾಜರಾದ ಮಾನ್ಯ ಎಚ್‌ಸಿಜಿಪಿಯವರ ವಾದವನ್ನು ದೀರ್ಘವಾಗಿ ಆಲಿಸಲಾಗಿದೆ. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಪ್ರಾ.ಸಾ.1, 4 ಮತ್ತು 6ರ ಆವೃತ್ತಿಗಳ ಮಧ್ಯೆ ಅಸಂಗತತೆಯಿದೆಯೆಂದು ಮತ್ತು ಎನ್‌ಡಿಪಿಎಸ್ ಅಧಿನಿಯಮದ 42 ಮತ್ತು 50ನೇ ಪ್ರಕರಣಗಳ ಹಲವಾರು ಕಡ್ಡಾಯ ಉಪಬಂಧಗಳನ್ನು ಪಾಲಿಸಿಲ್ಲವೆಂದು ವಾದಿಸಿದ್ದಾರೆ. ಎಫ್‌ಎಸ್‌ಎಲ್‌ಗೆ ಮಾದರಿಗಳನ್ನು ಕಳಿಸುವಲ್ಲಿ ಅತಿಯಾದ ವಿಳಂಬವಾಗಿತ್ತೆಂದು ಮತ್ತು ಗಾಂಜಾದ ಪ್ರಮಾಣದಲ್ಲಾದ ಇಳಿಕೆಯನ್ನು ಯಾವುದೇ ರೀತಿಯಲ್ಲಿ ವಿವರಿಸಲಿಲ್ಲವೆಂದು ವಾದಿಸಿದ್ದಾರೆ.ತನಿಖಾಧಿಕಾರಿಯ ಮಾದರಿ ಮೊಹರಿನಲ್ಲಿ ಕಾಗದ ಇರಲಿಲ್ಲವೆಂದು ಇದನ್ನು ಆಪಾದಿತವಾಗಿ ನಾಲ್ಕು ಬ್ಯಾಗುಗಳಲ್ಲಿ ಅಂಟಿಸಿ ಎಫ್‌ಎಸ್‌ಎಲ್‌ಗೆ ಕಳಿಸಲಾಗಿತ್ತೆಂದು ಮತ್ತೆ ನಿವೇದಿಸಿದ್ದಾರೆ. ಇವರು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಈ ಮುಂದಿನ ನಿರ್ಣಯಗಳನ್ನು ಅವಲಂಬಿಸಿದ್ದಾರೆ:

(i) ***ಕೇಂದ್ರೀಯ ನಿದ್ರಾಜನಕಗಳ ದಳ –ವಿರುದ್ಧ– ಬಹದ್ದೂರ್ ಸಿಂಗ್*** ಪ್ರಕರಣದಲ್ಲಿ ಎಸಿಆರ್ 2002(2011).

(ii) ***ಸುಖ್‌ದೇವ್ ಸಿಂಗ್ – ವಿರುದ್ಧ – ಹರಿಯಾಣ ರಾಜ್ಯ ಪ್ರಕರಣದಲ್ಲಿ 2013 (1) ಎಸ್‌ಸಿಸಿ (ಕ್ರಿ) 933***

(iii) ***ಕಿಶನ್‌ಚಂದ್ –ವಿರುದ್ಧ– ಹರಿಯಾಣ ರಾಜ್ಯ ಪ್ರಕರಣದಲ್ಲಿ (2013) 2 ಎಸ್‌ಸಿಸಿ (ಕ್ರಿ) 807.***

7. ಮಾನ್ಯ ಸರ್ಕಾರಿ ವಕೀಲರು, ಎನ್‌ಡಿಪಿಎಸ್ ಅಧಿನಿಯಮದ 42 ಮತ್ತು 50ನೇ ಪ್ರಕರಣದ ಕಡ್ಡಾಯ ಉಪಬಂಧಗಳ ಗಣನೀಯ ಅನುಸರಣೆಯ ಆಧಾರದ ಮೇಲೆ ಮಾಡಿದ ಅಪರಾಧ ನಿರ್ಣಯದ ತೀರ್ಪು ಮತ್ತು ಶಿಕ್ಷೆಯನ್ನು ಮಾಡಲಾಗಿದೆಯೆಂದು ಮತ್ತು ದಾಳಿ ಮಾಡಿರುವ ಅಧಿಕಾರಿ ಮತ್ತು ಇತರ ಅಧಿಕಾರಿಗಳ ಸಾಕ್ಷಿದಾರರ ಆವೃತ್ತಿಯನ್ನು ನಂಬದಿರುವುದಕ್ಕೆ ಯಾವುದೇ ಕಾರಣವಿಲ್ಲ ಎಂಬುದನ್ನು ಸಮರ್ಥಿಸಿದ್ದಾರೆ. ದಾಳಿಯನ್ನು ನಡೆಸಿದ ಅಧಿಕಾರಿಯು ದಂಡಾಧಿಕಾರಿಯವರಿಂದ ವಾರಂಟನ್ನು ಪಡೆದು ಶೋಧಿಸಲು ಸಮಯವಿರಲಿಲ್ಲವೆಂದು, ಆದುದರಿಂದ ಕೂಡಲೇ ಅವರು ಶೋಧನೆಯನ್ನು ಕೈಗೊಂಡರೆಂದು ಮತ್ತು ಅವರು ಸಿದ್ಧಪಡಿಸಿದ ಶೋಧನಾ ವಾರಂಟನ್ನು ನಂಬದಿರುವುದಕ್ಕೆ ಯಾವುದೇ ಕಾರಣವಿಲ್ಲವೆಂದು ವಾದಿಸಿದ್ದಾರೆ.ಅಧಿಕಾರಿ ಸಾಕ್ಷಿದಾರರ ಆವೃತ್ತಿಯಲ್ಲಿ ಕಂಡುಬರುವ ಅಸಂಗತತೆಯು ಸ್ವರೂಪದಲ್ಲಿ ಸಣ್ಣದಾಗಿದೆಯೆಂದು ಮತ್ತು ಅದನ್ನು ದೊಡ್ಡದು ಮಾಡುವ ಅಗತ್ಯವಿಲ್ಲವೆಂದು ವಾದಿಸಿದ್ದಾರೆ.ಆದುದರಿಂದ ಅವರು, ಅಪರಾಧ ನಿರ್ಣಯದ ತೀರ್ಪು ಮತ್ತು ಶಿಕ್ಷೆಯನ್ನು ದೃಢಪಡಿಸಬೇಕೆಂದು ನ್ಯಾಯಾಲಯವನ್ನು ಕೋರಿಕೊಂಡಿರುವರು.

8. ದಾಖಲೆಗಳನ್ನು ಪರಿಶೀಲಿಸಿದ ನಂತರ ಮತ್ತು ಪಕ್ಷಕಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ವಾದವನ್ನು ಆಲಿಸಿದ ನಂತರ ನನ್ನ ಪರಿಗಣನೆಗೆ ಈ ಮುಂದಿನ ಅಂಶಗಳು ಉದ್ಭವಿಸಿವೆ;

(ಎ) ಎನ್‌ಡಿಪಿಎಸ್ ಅಧಿನಿಯಮ 1985ರ 42 ಮತ್ತು 57ನೇ ಪ್ರಕರಣಗಳ ಕಡ್ಡಾಯ ಉಪಬಂಧಗಳನ್ನು

ಮನಸ್ಸಿನಲ್ಲಿಟ್ಟುಕೊಂಡು ಸರಿಯಾದ ದೃಷ್ಟಿಕೋನದಲ್ಲಿ ನ್ಯಾಯಾಲಯವು ಸಾಕ್ಷ್ಯವನ್ನು ಪರಿಗಣಿಸಿದೆಯೇ?

(ಬಿ) ಅಪರಾಧ ನಿರ್ಣಯದ ತೀರ್ಪು ಮತ್ತು ಶಿಕ್ಷೆಯ ತೀರ್ಪು ಕಾನೂನನ್ನು ಮತ್ತು ಅದರ ಸಂಗತಿಗಳನ್ನು ಸಮರ್ಥಿಸುತ್ತದೆಯೇ?

(ಸಿ) ಆದೇಶ ಯಾವುದು?

**ಕಾರಣಗಳು**

9. ಪ್ರಾಸಿಕ್ಯೂಷನ್‌ನ ಸಂಪೂರ್ಣ ಪ್ರಕರಣವು ಇಬ್ಬರು ಪ್ರತ್ಯೇಕ ಸಾಕ್ಷಿದಾರರಾದ ಇಬ್ರಾಹಿಂ ಬಿರಾದಾರ್ ಮತ್ತು ರಮೇಶ್ (ಪ್ರಾ.ಸಾ.2 ಮತ್ತು 3) ಮತ್ತು ಅಬಕಾರಿ ಉಪ ಆಯುಕ್ತರಾಗಿ ಕಾರ್ಯ ನಿರ್ವಹಿಸುತ್ತಿರುವ ಪ್ರಾ.ಸಾ.6 ಜಮ್ಮುಸಾಬ್ ಇವರ ಸಮ್ಮುಖದಲ್ಲಿ, ಅಬಕಾರಿ ನಿರೀಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಪ್ರಾ.ಸಾ.1 ಅಬೂಬಕರ್ ರವರು ರೂಪಿಸಿರುವರೆಂದು ಹೇಳಲಾದ ನಿಶಾನೆ ಪಿ.2, ಜಫ್ತಿ ಮಹಜರನ್ನು ಅವಲಂಬಿಸಿದೆ. ಪ್ರಾ.ಸಾ.6 ರವರು ಯಾದಗಿರಿಯ ಅಬಕಾರಿ ಉಪ ಆಯುಕ್ತರ ಸಮ್ಮತಿ ಪ್ರಭಾರವನ್ನು ಪಡೆದುಕೊಂಡಿದ್ದುದಾಗಿ ತಿಳಿಸಿದ್ದರು.ಆದುದರಿಂದ, ಮಹಜರನ್ನು ಸಂಪೂರ್ಣವಾಗಿ ಸಮರ್ಥಿಸಲು ಮತ್ತು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡುವುದು ಪ್ರಾಸಿಕ್ಯೂಷನ್‌ಗೆ ಅನಿವಾರ್ಯವಾಗಿದೆ.

10. ನಮ್ಮ ಮುಂದಿರುವ ಪ್ರಕರಣವು, 1ನೇ ಆಪಾದಿತನ ಮನೆಯಲ್ಲಿ 13 ಕಿ.ಗ್ರಾಂ.ಗಳ ವಿವಾದಿತ ಗಾಂಜಾವನ್ನು ವಶಪಡಿಸಿಕೊಂಡಿರುವುದಕ್ಕೆ ಸಂಬಂಧಪಡುತ್ತದೆ. ಪ್ರಾಸಿಕ್ಯೂಷನ್‌ನ ಪ್ರಕಾರ, ಪ್ರಶ್ನಿತ ಮನೆಯು 2ನೇ ಆಪಾದಿತನಿಗೆ ಸೇರಿದೆ.ಪ್ರಕರಣವನ್ನು ಇತ್ಯರ್ಥಪಡಿಸುವಾಗ, ಮಾನ್ಯ ವಿಶೇಷ ನ್ಯಾಯಾಧೀಶರು, 1ನೇ ಸಂಖ್ಯೆಯ ಆಪಾದಿತನ ತಂದೆಯಾದ 2ನೇ ಆಪಾದಿತನನ್ನು ಖುಲಾಸೆಗೊಳಿಸಿದ್ದಾರೆ.ಪ್ರಾಥಮಿಕ ತನಿಖೆಯನ್ನು ನಡೆಸಿದ ಪ್ರಾ.ಸಾ.1 ಅಬೂಬ್‌ಕರ್‌ರವರು, 1ನೇ ಸಂಖ್ಯೆಯ ಮತ್ತು 2ನೇ ಸಂಖ್ಯೆಯ ಆಪಾದಿತರ ನಡುವೆ ಇದ್ದ ಸಂಬಂಧದ ಬಗ್ಗೆ ಏನನ್ನೂ ತಿಳಿಸಿಲ್ಲ. ದಿನಾಂಕ

29.10.2010ರಂದು ಹೆಚ್ಚಿನ ತನಿಖೆಯನ್ನು ಕೈಗೊಂಡ ಪ್ರಾ.ಸಾ.4 ರವರು ಮಾತ್ರ ಅಷ್ಟರಮಟ್ಟಿಗೆ ಇದನ್ನು ಇತ್ಯರ್ಥಪಡಿಸಿರುವರು.

11. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಅನಿಲ್‌ಕುಮಾರ್ ಪ್ರಾ.ಸಾ.4 ರವರು, ಹೆಚ್ಚಿನ ತನಿಖೆಯನ್ನು ನಡೆಸುವ ಸಂದರ್ಭದಲ್ಲಿ, ಅವರು 2ನೇ ಆಪಾದಿತನು, 1ನೇ ಆಪಾದಿತನ ತಂದೆಯಾಗಿದ್ದನೆಂದು ಮತ್ತು ಅವರಿಬ್ಬರು ಒಟ್ಟಿಗೆ ವಾಸಿಸುತ್ತಿದ್ದರೆಂದು ಹೇಳಿದ್ದಾರೆ. ಈ ಮನೆಯಲ್ಲಿ ಆಪಾದಿತವಾದ ಗಾಂಜಾವನ್ನು ಬೋರ್ ಸಂ.1–1–60/19ರಲ್ಲಿ ಜಫ್ತಿ ಮಾಡಲಾಗಿತ್ತು ಮತ್ತು ಇದು ವಿದ್ಯಾನಗರ ಪ್ರದೇಶದ ಗುಟ್ಟಿಪೇಟೆ ಶಾಲೆಯ ಬಳಿಯಿರುವ ಶಹಪುರ ಪಟ್ಟಣದಲ್ಲಿತ್ತು.

12. ಎನ್‌ಡಿಪಿಎಸ್ ಅಧಿನಿಯಮವು, ನಿರ್ದಯವಾದ ಶಿಕ್ಷೆಯನ್ನು ಉಪಬಂಧಿಸಿದೆ. ಆದುದರಿಂದ ಎಲ್ಲಾ ಕಡ್ಡಾಯ ಉಪಬಂಧಗಳನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕಾಗುತ್ತದೆ. ಉಪಬಂಧಗಳ ಗಣನೀಯವಾದ ಅನುಸರಣೆಯು ಕಾನೂನಿನ ಕಣ್ಣಿನಲ್ಲಿ ಅನುಸರಣೀಯವಾಗಿರುವುದಿಲ್ಲ. ***ಸುಖ್‌ದೇವ್ ಸಿಂಗ್ –ವಿರುದ್ಧ– ಹರಿಯಾಣ ರಾಜ್ಯ*** [1], ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಪ್ರಕಾರ ಅಧಿನಿಯಮದ 42ನೇ ಪ್ರಕರಣದ ಉಪಬಂಧಗಳ ಯಮಳ ಉದ್ದೇಶವು ಈ ಮುಂದಿನಂತಿದೆ:

> "42ನೇ ಪ್ರಕರಣವು ಕಡ್ಡಾಯ ಉಪಬಂಧವಾಗಿದ್ದು, ಇದನ್ನು ವಿಶ್ಲೇಷಿಸಲೇಬೇಕಾಗಿದ್ದು, ಕಟ್ಟುನಿಟ್ಟಾಗಿ ಪಾಲಿಸಲೇಬೇಕು – ವರಿಷ್ಠಾಧಿಕಾರಿಗೆ ಒದಗಿಸಲಾದ ಮಾಹಿತಿಯ ಅನುಸರಣೆಯನ್ನು ಕೂಡಲೇ ಅಥವಾ ತುಂಬಾ ಅಲ್ಪಾವಧಿಯದ್ದಾಗಿರಬೇಕು ಮತ್ತು ಆದ್ಯತೆಯ ಮೇರೆಗೆ ಜಫ್ತಿಗೂ ಮುನ್ನವೇ ಆಗಿರತಕ್ಕದ್ದು. ತನಿಖಾಧಿಕಾರಿಯು, ಲಿಖಿತದಲ್ಲಿ ವಿವರಿಸಬೇಕಾದ ಕಾರಣಗಳಿಗಾಗಿ, ಲಿಖಿತದಲ್ಲಿ ಮಾಹಿತಿಯನ್ನು ಕೂಡಲೇ ಇಳಿಸಲಾಗದಿದ್ದಲ್ಲಿ, ಸದರಿ ಮಾಹಿತಿಯನ್ನು ತನ್ನ ವರಿಷ್ಠಾಧಿಕಾರಿಗೆ ಕಳಿಸಬೇಕು. ಆದರೆ ತಡವಾಗಿ

1. 2013 (1) ಎಸ್‌ಸಿಸಿ (ಕ್ರಿ) 933

ಇದನ್ನು ಮಾಡಬಹುದು ಮತ್ತು ಆದ್ಯತೆಯಂತೆ ಜಫ್ತಿಗೂ ಮೊದಲೇ ಮಾಡಬಹುದು".

ಸದರಿ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಅಭಿಪ್ರಾಯಪಡುವುದು ಏನೆಂದರೆ, 42(1) ಮತ್ತು 42(2)ನೇ ಪ್ರಕರಣಗಳ ಉಪಬಂಧಗಳನ್ನು ಒಟ್ಟಾರೆಯಾಗಿ ಅನುಸರಿಸದಿರುವುದನ್ನು ಅನುಮತಿಸಿರುವುದಿಲ್ಲ ಎಂಬುದಾಗಿದೆ. ಅಧಿನಿಯಮದ 42ನೇ ಪ್ರಕರಣದಲ್ಲಿ ನಮೂದಿಸಲಾದಂತೆ, ಒಪ್ಪಿಕೊಳ್ಳಬಹುದಾದ ಕಾರಣಗಳೊಂದಿಗೆ ಆದ ವಿಳಂಬಕ್ಕೆ ಸಂಬಂಧಿಸಿದ ತೃಪ್ತಿಕರ ವಿವರಣೆಯಿಂದ ಕೂಡಿದ ವಿಳಂಬವಾದ ಅನುಸರಣೆಯು ಅಗತ್ಯವಾದುದಾಗಿದೆ.42ನೇ ಪ್ರಕರಣದ ಗಣನೀಯ ಅನುಸರಣೆಯನ್ನು ಸಾಕಷ್ಟು ಮಾಡಲಾಗಿದೆಯೇ ಅಥವಾ ಇಲ್ಲವೇ ಎಂಬುದು ಪ್ರತಿಯೊಂದು ಪ್ರಕರಣದಲ್ಲಿ ನಿರ್ಧರಿಸಬೇಕಾದ ಸಂಗತಿಯ ಪ್ರಶ್ನೆಯಾಗಿರುತ್ತದೆ.

13. ***ಕರ್ನೈಲ್ ಸಿಂಗ್ –ವಿರುದ್ಧ– ಹರಿಯಾಣ ರಾಜ್ಯ***[2], ಪ್ರಕರಣದಲ್ಲಿ ಮಾನ್ಯಸರ್ವೋಚ್ಚ ನ್ಯಾಯಾಲಯದ ಸಾಂವಿಧಾನಿಕ ಪೀಠವು ನೀಡಿದ ತೀರ್ಮಾನವನ್ನು ನೋಡುವುದು ತುಂಬಾ ಪ್ರಸಕ್ತವಾಗಿದೆ. ಸದರಿ ತೀರ್ಮಾನವನ್ನು ***ಸುಖ್‌ದೇವ್*** (ಮೇಲಿನ) ಪ್ರಕರಣದಲ್ಲಿ ಅನುಸರಿಸಲಾಗಿದೆ. ಆಜ್ಞಾಪಕ ಉಪಬಂಧಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಉದ್ದೇಶ. ಮುಗ್ಧ ವ್ಯಕ್ತಿಗಳ ಮೇಲೆ ಬೀರುವ ಕೆಟ್ಟ ಪರಿಣಾಮವನ್ನು ತಪ್ಪಿಸುವುದಾಗಿದೆ. ***ಸುಖ್‌ದೇವ್*** ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಪ್ರಕಾರ ಶಾಸಕಾಂಗವು ತನ್ನ ವಿವೇಚನೆಯಂತೆ 42ನೇ ಪ್ರಕರಣದ ಆಜ್ಞಾಪಕ ಉಪಬಂಧವನ್ನು ಮಾಡಿದ್ದು ಅದು ಆದ್ಯತೆಯಾಗಿರುತ್ತದೆ. 42ನೇ ಪ್ರಕರಣದ ಉದ್ದೇಶವು, ಸಂರಕ್ಷಣೆಯನ್ನು ನೀಡುವುದಾಗಿದೆ ಮತ್ತು ಸರಿಯಾದ ಪ್ರಕ್ರಿಯೆಯನ್ನು ವಿಧಿಸಿದ್ದು ಅದು ಆಜ್ಞಾಪಕವಾಗಿರುತ್ತದೆ ಮತ್ತು ಅದನ್ನು ತನಿಖಾಧಿಕಾರಿಯು ಅನುಸರಿಸಬೇಕಾಗುತ್ತದೆ. ಅವನು ಯಾವುದೇ ಯುಕ್ತವಲ್ಲದ ವಿಳಂಬ ಮಾಡದೆ ಕೂಡಲೇ ವರಿಷ್ಠಾಧಿಕಾರಿಗೆ ಮಾಹಿತಿಯನ್ನು ಕಳುಹಿಸಬೇಕಾಗುತ್ತದೆ. ಕೂಡಲೇ ಲಿಖಿತದಲ್ಲಿ ದಾಖಲಿಸಬೇಕಾದ ವಿಶೇಷ

2 [2009]8 ಎಸ್‌ಸಿಸಿ 539

ಕಾರಣಗಳಿಗಾಗಿ, ಲಿಖಿತದಲ್ಲಿ ಮಾಹಿತಿಯನ್ನು ಇಳಿಸಲು ಆಗುವುದಿಲ್ಲ ಮತ್ತು ಸದರಿ ಮಾಹಿತಿಯನ್ನು ವರಿಷ್ಠಾಧಿಕಾರಿಗೆ ಕಳಿಸಬೇಕು ಆದರೆ, ಅದಕ್ಕು ಮೊದಲೇ ಆದ್ಯತೆಯಂತೆ ಕಳಿಸಬೇಕು. ಆದುದರಿಂದ, ಅಧಿನಿಯಮದ 42ನೇ ಪ್ರಕರಣದ ಕಟ್ಟುನಿಟ್ಟಿನ ಉಪಬಂಧಗಳಿಂದ ಯಾವುದೇ ರೀತಿಯಲ್ಲಿ ತಪ್ಪಿಸಿಕೊಳ್ಳಲು ಆಗುವುದಿಲ್ಲ. ಆದುದರಿಂದ ನಾವು, ಅಧಿನಿಯಮದ 42ನೇ ಪ್ರಕರಣವನ್ನು ಪ್ರಸ್ತುತ ಪ್ರಕರಣದಲ್ಲಿ ಕರಾರುವಾಕ್ಕಾಗಿ ಪಾಲಿಸಲಾಗಿದೆಯೇ ಎಂಬುದನ್ನು ನೋಡಬೇಕಾಗುತ್ತದೆ.

14. ಪ್ರಾ.ಸಾ.1, ಅಬೂಬ್‌ಕರ್ ರವರು 16.10.2009ರಿಂದ 4.2.2011ರ ವರೆಗೆ ಯಾದಗಿರಿಯಲ್ಲಿ ಅಬಕಾರಿ ಆಯುಕ್ತರಾಗಿದ್ದರು. ಅವರು, ತಾನು ದಿನಾಂಕ 11.10.2010ರಂದು, ಸಂಜೆ 5.30ರಲ್ಲಿ ಯಾದಗಿರಿಯ ಷಹಾಪುರ ಪಟ್ಟಣದಲ್ಲಿ ಗಸ್ತು ತಿರುಗುತ್ತಿದ್ದೆ, ಆಗ ಚಾಂದ್‌ಪಾಷ ಎಂಬ ಹೆಸರಿನ ಒಬ್ಬ ವ್ಯಕ್ತಿ, ವಿದ್ಯಾನಗರದಲ್ಲಿ ತನ್ನ ಮನೆಯಲ್ಲಿ ಗಾಂಜಾ ಸೊಪ್ಪನ್ನು ಅನಧಿಕೃತವಾಗಿ ಸಂಗ್ರಹಿಸಿಟ್ಟಿದ್ದಾನೆಂಬಂಥ ನಂಬಲರ್ಹ ಮಾಹಿತಿ ಬಂತು. ಆದುದರಿಂದ, ತಾನೇ ಸ್ವತಃ ತನ್ನ ಸಿಬ್ಬಂದಿಯಾಗಿರುವ ಉಕ್ಕಡಗತ್ರಿ, ಅಬಕಾರಿ ಆಯುಕ್ತ ಇವರೊಂದಿಗೆ ಮತ್ತು ಇಬ್ಬರು ಪ್ರತ್ಯೇಕ ಸಾಕ್ಷಿದಾರರು ಎಂದರೆ ಇಬ್ರಾಹಿಂ ಬಿರಾದಾರ್ ಮತ್ತು ರಮೇಶ್‌ರೊಂದಿಗೆ ಸ್ಥಳಕ್ಕೆ ಎಂದರೆ 1ನೇ ಆಪಾದಿತನ ಮನೆಗೆ ಹೋದೆವು. ಅಧಿನಿಯಮದ 42ನೇ ಪ್ರಕರಣದ ಪ್ರಕಾರ ಶೋಧನಾ ವಾರಂಟನ್ನು ಸಿದ್ಧಪಡಿಸಿದೆ. ಮನೆಯ ಬಾಗಿಲು ಮುಚ್ಚಿರಲಿಲ್ಲ ಮತ್ತು ಮನೆಯನ್ನು ಪ್ರವೇಶಿಸಿದ ಮೇಲೆ ಒಳಗಡೆ ಯಾರಿದ್ದರೆಂದು ವಿಚಾರಿಸಿದೆವೆಂದು ಹೇಳಿಕೆ ನೀಡಿದ್ದಾರೆ. 1ನೇ ಆಪಾದಿತನು ಮನೆಯಿಂದ ಬಂದು ತಾನು ಚಾಂದ್‌ಪಾಷ ಎಂದು ಮಹಮದ್ ನದಾಫ್‌ನ ಮಗ ಎಂದು ಪರಿಚಯ ಮಾಡಿಕೊಂಡ ದಾಳಿಕಾರರು, ಪ್ರಾ.ಸಾ.1 ಸ್ವೀಕರಿಸಿದ ನಂಬಲರ್ಹ ಮಾಹಿತಿಗೆ ಸಂಬಂಧಪಟ್ಟಂಥ ವ್ಯಕ್ತಿಯನ್ನು ಗುರುತಿಸಿದುದರಲ್ಲಿ ಖಚಿತತೆ ಇತ್ತು.

15. ಅವರೆಲ್ಲರೂ ಮನೆಯನ್ನು ಪ್ರವೇಶಿಸಿದಾಗ, 1ನೇ ಆಪಾದಿತನು ಓಡಿಹೋಗಲು ಪ್ರಯತ್ನಿಸಿದನೆಂದು ಮತ್ತು ತಾನು ತನ್ನ ಸಿಬ್ಬಂದಿಯೊಂದಿಗೆ ಅವನನ್ನು ಹಿಡಿದೆನೆಂದು ಪ್ರಾ.ಸಾ.1 ಮತ್ತೆ ಹೇಳಿಕೆ ನೀಡಿದ್ದಾರೆ. ಅಲ್ಲಿ ಒಂದು ಕಪಾಟು ಇದ್ದು ಅದರ ಪಕ್ಕದಲ್ಲಿ ನಾಲ್ಕು ಪ್ಲಾಸ್ಟಿಕ್ ಬ್ಯಾಗುಗಳು ಕಂಡು

ಬಂದವು. ಅವುಗಳನ್ನು ತೆಗೆದು ನೋಡಿದ ಮೇಲೆ ಗಾಂಜಾ ಎಲೆಗಳಿರುವುದು ಕಂಡು ಬಂತು ಮತ್ತು ಅವುಗಳನ್ನು ತೂಕ ಮಾಡಲಾಯಿತು. ನಾಲ್ಕು ಬ್ಯಾಗುಗಳಲ್ಲಿ ಒಂದು 4.ಕಿ.ಗ್ರಾಂ.ತೂಕವಿತ್ತು ಮತ್ತು ಉಳಿದ 3 ಬ್ಯಾಗುಗಳಲ್ಲಿ ಪ್ರತಿಯೊಂದೂ 3 ಕಿ.ಗ್ರಾಂ. ಗಳಿದ್ದವು. ವಿಚಾರಿಸಿದ ನಂತರ 1ನೇ ಆಪಾದಿತನು, ತಾನು ಅವುಗಳನ್ನು ಸಂಗ್ರಹಿಸಿಟ್ಟುಕೊಳ್ಳಲು ಯಾವುದೇ ಲೈಸೆನ್ಸ್ ಅಥವಾ ಅನುಮತಿಯನ್ನು ಪಡೆದುಕೊಂಡಿಲ್ಲವೆಂದು ತಿಳಿಸಿದನು. ಇದಾದ ನಂತರ, ಪ್ರತಿಯೊಂದು ಬ್ಯಾಗ್‌ನಿಂದ ಮಾದರಿಗಾಗಿ 100 ಗ್ರಾಂ.ಗಾಂಜಾವನ್ನು ತೆಗೆದುಕೊಂಡು ನಾಲ್ಕು ಪ್ರತ್ಯೇಕ ಲಕೋಟೆಗಳಲ್ಲಿ ಇಟ್ಟು ಮಾದರಿಗಳಿದ್ದ ನಾಲ್ಕು ಕವರುಗಳಿಗೆ ಮತ್ತು ಚೀಟಿಗಳಲ್ಲಿ ಪಂಚರ ಸಹಿ ಮಾಡಿಸಿ ಅಂಟಿಸಿದೆವು. ದಿನಾಂಕ 26.10.2010ರಂದು, ಸದರಿ ಮಾದರಿ ಪ್ಯಾಕೆಟ್‌ಗಳನ್ನು, ರಾಸಾಯನಿಕ ಪರೀಕ್ಷೆಗಾಗಿ ಎಫ್‌ಎಸ್‌ಎಲ್ ಬೆಂಗಳೂರು ಇಲ್ಲಿಗೆ ಕಳಿಸಲಾಗಿತ್ತು ಮತ್ತು ವರದಿಯನ್ನು 28.10.2010ರಂದು ಸ್ವೀಕರಿಸಲಾಗಿತ್ತು. ದಿನಾಂಕ 29.10.2010ರಂದು ಹೆಚ್ಚಿನ ತನಿಖೆಗಾಗಿ ಆಪರಾಧಿಕ ಸಾಕ್ಷ್ಯ 6 ಅನಿಲ್ ಕುಮಾರ್‌ಗೆ ಹಸ್ತಾಂತರಿಸಲಾಗಿತ್ತು.

16. ಪ್ರಾ.ಸಾ.1 ತಾನು ಸಿದ್ಧಪಡಿಸಿದ ಶೋಧನಾ ವಾರಂಟೆಂದು ನಿಶಾನೆ ಪಿ.1ನ್ನು ಗುರುತಿಸಿದರು ಮತ್ತು ನಿಶಾನೆ ಪಿ.1 (ಎ)ಯನ್ನು ಅವರ ಸಹಿಯೆಂದು ಹೇಳಲಾಗಿದೆ. ನಿಶಾನೆ ಪಿ.2 ಪಂಚನಾಮೆಯಾಗಿದ್ದು, ಇದನ್ನು ನಾಲ್ಕು ಬ್ಯಾಗುಗಳಲ್ಲಿ 13 ಕಿ.ಗ್ರಾಂ.ಗಾಂಜಾವನ್ನು ಇಟ್ಟಿದ್ದು ಅದನ್ನು ವಶಪಡಿಸಿಕೊಂಡಿರುವುದಕ್ಕೆ ಸಂಬಂದಿಸಿದಂತೆ 1ನೇ ಆಪಾದಿತನ ಮನೆಯಲ್ಲಿ ರೂಪಿಸಲಾಗಿದೆಯೆಂದು ಹೇಳಲಾಗಿದೆ. ನಿಶಾನೆ ಪಿ.3 ವಿಶೇಷ ನ್ಯಾಯಾಧೀಶರ ಅಧಿಕಾರ ವ್ಯಾಪ್ತಿಯಲ್ಲಿ ಅವರು ಸಲ್ಲಿಸಿದ ವರದಿಯಾಗಿದೆ ಮತ್ತು ನಿಶಾನೆ ಪಿ.4 ಪ್ರಥಮ ಮಾಹಿತಿ ವರದಿಯಾಗಿದೆ. ನಿಶಾನೆ ಪಿ.5, ರಾಸಾಯನಿಕ ವಿಶ್ಲೇಷಕನ ವರದಿಯಾಗಿದೆ ಮತ್ತು ನಿಶಾನೆ ಪಿ.6, ಯಾದಗಿರಿಯ ಅಬಕಾರಿ ಉಪ ಆಯುಕ್ತರ ಕಚೇರಿಯ ಮಾದರಿ ಸಹಿಯಿರುವ ಹಾಳೆಯಾಗಿದೆ. ನಿಶಾನೆ ಪಿ.7 1ನೇ ಆಪಾದಿತನ ಮನೆಗೆ ಸಂಬಂಧಪಟ್ಟಂತೆ ಪಟ್ಟಣ ಪುರಸಭೆಯ ಮುಖ್ಯ ಅಧಿಕಾರಿಯು ನೀಡಿದ ಪ್ರಮಾಣಪತ್ರವಾಗಿದೆ. ಮುಖ್ಯ ವಿಚಾರಣೆಯಲ್ಲಾಗಲಿ ಅಥವಾ ಪಾಟೀ ಸವಾಲಿನಲ್ಲಾಗಲಿ, ಪ್ರಾ.ಸಾ.1, ಅಧಿನಿಯಮದ 42ನೇ ಪ್ರಕರಣದ ಪರಿಭಾಷೆಯಲ್ಲಿ ತನ್ನ ವರಿಷ್ಠಾಧಿಕಾರಿಗೆ ನೀಡಿರುವ ಮಾಹಿತಿಯನ್ನು ಕುರಿತಂತೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

17. ಸಾಮಾನ್ಯವಾಗಿ, ಎನ್‌ಡಿಪಿಎಸ್ ಅಧಿನಿಯಮದ ಮೇರೆಗೆ ದಾಳಿ ನಡೆಸಿದ ಅಧಿಕಾರಿಯು, ದಾಳಿ/ಶೋಧನೆಯನ್ನು ನಡೆಸಲು ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಧೀಶರಿಂದ ಶೋಧನಾ ವಾರಂಟನ್ನು ಪಡೆದುಕೊಳ್ಳಬೇಕು ಮತ್ತು ಅಧಿನಿಯಮದ 42(1)ನೇ ಪ್ರಕರಣದ ಎರಡನೇ ಪರಂತುಕವು, ವಾರಂಟು ಅಥವಾ ಅನುಜ್ಞೆಯಿಲ್ಲದೆ ದಾಳಿ ಮಾಡುವ ಅಧಿಕಾರಿಯು ಆವರಣವನ್ನು ಪ್ರವೇಶಿಸುವುದನ್ನು ಮತ್ತು ಶೋಧನೆಯನ್ನು ನಡೆಸುವುದನ್ನು ಸಮರ್ಥಿಸುತ್ತದೆ. ಆದರೆ, ಅಧಿನಿಯಮದ 42ನೇ ಪ್ರಕರಣದ (2)ನೇ ಉಪ–ಪ್ರಕರಣವು, ಯಾರೇ ಅಧಿಕಾರಿಯು (1)ನೇ ಉಪ–ಪ್ರಕರಣದ ಮೇರೆಗೆ ಲಿಖಿತದಲ್ಲಿ ಮಾಹಿತಿಯನ್ನು ಪಡೆದುಕೊಂಡಾಗ ಅಥವಾ ಅದರ ಪರಂತುಕದ ಮೇರೆಗೆ ತನ್ನ ನಂಬಿಕೆಯಂತೆ ಆಧಾರಗಳನ್ನು ದಾಖಲಿಸಿಕೊಂಡಾಗ ಅವನು, 72 ಗಂಟೆಗಳೊಳಗೆ ಅದರ ಪ್ರತಿಯನ್ನು ಆತನ ನಿಕಟ ಹಿರಿಯ ವರಿಷ್ಠ ಅಧಿಕಾರಿಗೆ ಕಳುಹಿಸುವುದನ್ನು ಆಜ್ಞಾಪಿಸುತ್ತದೆ. ಅಧಿಕಾರಿಯು ನಿರೀಕ್ಷಕ ದರ್ಜೆಗಿಂತ ಕಡಿಮೆ ದರ್ಜೆಯವರಾಗಿರದಿದ್ದರೆ, ಪೊಲೀಸು ಠಾಣೆಯಲ್ಲಿರುವಾಗ ಯಾವುದೇ ಮಾಹಿತಿಯನ್ನು ಸ್ವೀಕರಿಸಿದರೆ, ಅವನು ಇದನ್ನು ಲಿಖಿತದಲ್ಲಿ ದಾಖಲಿಸುವುದು ಮತ್ತು ಅನುಚಿತ ವಿಳಂಬ ಮಾಡದೆ ತಮ್ಮ ನಿಕಟ ವರಿಷ್ಠಾಧಿಕಾರಿಗೆ 72 ಗಂಟೆಗಳೊಳಗೆ ಸೂಚಿಸಿರುವುದನ್ನು ತಿಳಿಸತಕ್ಕದ್ದು.

18. ಪ್ರಾ.ಸಾ.1 ಪ್ರಾಸಿಕ್ಯೂಷನ್‌ನ ಕಥೆಯನ್ನು ಉಲ್ಲೇಖ ಮಾಡುವಾಗ, ರಹಸ್ಯ ಮಾಹಿತಿಯನ್ನು ಸ್ವೀಕರಿಸಿದ ಕೂಡಲೇ ವಿಷಯವನ್ನು ವರಿಷ್ಠಾಧಿಕಾರಿಗೆ ವರದಿ ಮಾಡಿರುವ ಬಗ್ಗೆ ಏನನ್ನೂ ತಿಳಿಸಿಲ್ಲ. ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಅಂಥ ವಿವರಣೆ ಇಲ್ಲದೇ ಇರುವುದು ಎದ್ದು ಕಾಣುತ್ತದೆ. ಮಾನ್ಯ ಎಚ್‌ಸಿಜಿಪಿಯವರು, ಯಾದಗಿರಿಯ ಅಬಕಾರಿ ಉಪ ಆಯುಕ್ತರ ಪ್ರಭಾರದಲ್ಲಿದ್ದರೆಂದು ಹೇಳಲಾಗಿದ್ದ ಪ್ರಾ.ಸಾ.6, ಜಮ್ಮುಸಾಬ್‌ನ ಹೇಳಿಕೆಯನ್ನು ಭಾವಾವೇಶದಿಂದ ಆಧರಿಸಿದ್ದಾರೆ. ಅವರು, ತಾನು, ಯಾದಗಿರಿಯ ಷಹಪುರವನ್ನು ಮತ್ತು ಷಹಪುರ ತಾಲ್ಲೂಕುಗಳನ್ನು ಒಳಗೊಂಡಿರುವ ಯಾದಗಿರಿಯ ಅಬಕಾರಿ ಉಪ ಆಯುಕ್ತರ ಸಮ್ಮತ ಪ್ರಭಾರವನ್ನು ವಹಿಸಿಕೊಂಡಿದ್ದೆನೆಂದು ಹೇಳಿಕೆ ನೀಡಿದ್ದಾರೆ. ಅವರು, ದಿನಾಂಕ 11.10.2010ರಂದು ತಾನು ಯಾದಗಿರಿಯಿಂದ ಗುಲ್ಬರ್ಗಕ್ಕೆ ಹೋಗುತ್ತಿದ್ದೆನೆಂದು ಮತ್ತು ತಾನು ಸಾಯಂಕಾಲ ಯಾರೋ ಒಬ್ಬ ವ್ಯಕ್ತಿ ಷಹಪುರದಲ್ಲಿ ಕಾನೂನುಬಾಹಿರವಾಗಿ

ಗಾಂಜಾವನ್ನು ಸಂಗ್ರಹಿಸಿಟ್ಟುಕೊಂಡಿರುವ ಬಗ್ಗೆ ಅಬಕಾರಿ ನಿರೀಕ್ಷಕರಿಂದ ಕರೆ ಬಂತೆಂದು ಹೇಳಿಕೆ ನೀಡಿದ್ದಾರೆ. ಅವರು, ಷಹಪುರದ ಬಸ್ ನಿಲ್ದಾಣದ ಬಳಿ ಬರಲು ತನ್ನನ್ನು ಕೇಳಿದರೆಂದು ಹೇಳಿಕೆ ನೀಡಿದ್ದಾರೆ.ನಾನು ಅಲ್ಲಿಗೆ ಹೋದಾಗ, ಅವನು ತಾನು ನಂಬಲರ್ಹ ಮಾಹಿತಿಯು ಬಂತು ಎಂಬ ಬಗ್ಗೆ ನಿರೀಕ್ಷಕರು ತಿಳಿಸಿದರೆಂದು ಹೇಳಿಕೆ ನೀಡಿದ್ದಾರೆ.ಪ್ರಾ.ಸಾ.1 ಮುಂದೆ ಹೋಗಿದ್ದು ಅವನನ್ನು ಮತ್ತೊಂದು ವಾಹನದಲ್ಲಿ ಹಿಂಬಾಲಿಸಿದೆವೆಂದು ಅವರು ಹೇಳಿಕೆ ನೀಡಿದ್ದಾರೆ. ಎರಡೂ ವಾಹನಗಳು ವಿದ್ಯಾನಗರದಲ್ಲಿರುವ ಮನೆಯ ಬಳಿಗೆ ಹೋಗಿ, ಕೆಜಿಎನ್ ಎಂಬ ಅಕ್ಷರಗಳನ್ನು ಹೊಂದಿರುವ ಮನೆಯ ಮುಂದೆ ನಿಂತವೆಂದು ಅವರು ಹೇಳಿಕೆ ನೀಡಿದ್ದಾರೆ. ಅಬಕಾರಿ ನಿರೀಕ್ಷಕರು ದಸ್ತಗಿರಿ ವಾರಂಟನ್ನು ತಯಾರಿಸಿದ್ದರು ಮತ್ತು ಬಾಗಿಲು ತೆರೆದಿದ್ದರಿಂದ, ಅವರೆಲ್ಲರೂ ಪ್ರವೇಶಿಸಿದರೆಂದು ಮತ್ತು ಒಬ್ಬ ವ್ಯಕ್ತಿ ಹೊರಬಂದನೆಂದು ಮತ್ತು ವಿಚಾರಣೆ ನಡೆಸಿದಾಗ, ತನ್ನ ಹೆಸರು ಚಾಂದ್‌ಪಾಷ ಎಂದು, ಮಹಮದ್ ನದಾಫ್‌ನ ಮಗನೆಂದು ಹೇಳಿದ್ದಾನೆ. ಪ್ರಾ.ಸಾ.1 ಸ್ವೀಕರಿಸಿದ ನಂಬಲರ್ಹ ಮಾಹಿತಿಯ ಬಗ್ಗೆ ಅವನು ತಿಳಿಸಿದ್ದನು. ಕಪಾಟಿನ ಬಳಿ ನಾಲ್ಕು ಬ್ಯಾಗುಗಳಿದ್ದವೆಂದು, ಮತ್ತು ವಿಚಾರಿಸಿದ ನಂತರ ಅವನು ಅದು ಹೂವುಗಳೆಂದು ಹೇಳಿದನೆಂದು ಹೇಳಿಕೆ ನೀಡಿದ್ದಾರೆ. ಅವುಗಳನ್ನು ತೆರೆದಾಗ, ಒಣ ಗಾಂಜಾ ಸೊಪ್ಪು ಕಂಡು ಬಂದಿದ್ದು, ಅದನ್ನು ಸಂಗ್ರಹಿಸಲು ಯಾವುದೇ ಲೈಸೆನ್ಸ್ ಅಥವಾ ಅನುಮತಿಯನ್ನು ಪಡೆದುಕೊಂಡಿರಲಿಲ್ಲವೆಂದು ಹೇಳಿಕೆ ನೀಡಿದ್ದಾರೆ.

19. ಪ್ರಾ.ಸಾ.6ರ ಪ್ರಕಾರ, ಗಾಂಜಾವನ್ನು ತೂಕ ಮಾಡಲಾಗಿತ್ತೆಂದು ಮತ್ತು ಒಂದು ಬ್ಯಾಗಿನಲ್ಲಿ ನಾಲ್ಕು ಕಿ.ಗ್ರಾಂ.ಗಳಿತ್ತೆಂದು ಮತ್ತು ಉಳಿದ 3 ಬ್ಯಾಗುಗಳಲ್ಲಿ ಪ್ರತಿಯೊಂದರಲ್ಲಿ 3 ಕಿ.ಗ್ರಾಂ.ಸೊಪ್ಪಿರುವುದು ಕಂಡು ಬಂದಿದೆ. ಪ್ರತಿಯೊಂದು ಬ್ಯಾಗ್‌ನಿಂದ ಮಾದರಿಗಾಗಿ 100 ಗ್ರಾಂಗಳನ್ನು ತೆಗೆದುಕೊಳ್ಳಲಾಯಿತು ಮತ್ತು ನಾಲ್ಕು ಕವರುಗಳಲ್ಲಿ ಅದನ್ನು ಇಟ್ಟು ಪಂಚರು ಸಹಿ ಹಾಕಿರುವ ಚೀಟಿಗಳನ್ನು ಅಂಟಿಸಿದ ನಂತರ ಮುಚ್ಚಲಾಯಿತು.ಮಾನ್ಯ ಎಚ್‌ಸಿಜಿಪಿ ಯವರು ವಾದ ಮಾಡಿರುವುದು ಏನೆಂದರೆ, ಪ್ರಾ.ಸಾ.1 ಕ್ಕೆ ಪ್ರಾ.ಸಾ.6 ನಿಕಟ ಉನ್ನತ ಅಧಿಕಾರಿಯಾಗಿರುವುದರಿಂದ ಪ್ರಾ.ಸಾ.1 ಇವರು ಪ್ರಾ.ಸಾ. 6ಕ್ಕೆ ನೀಡಿದ ಮಾಹಿತಿಯು ಅಧಿನಿಯಮದ 42ನೇ ಪ್ರಕರಣವನ್ನು ಗಣನೀಯವಾಗಿ ಪಾಲಿಸುವುದು ಎಂಬುದಾಗಿದೆ.

ಇದನ್ನು ಜಾರಿಗೊಳಿಸಲು ದಾಖಲೆಯಲ್ಲಿರುವ ಸಾಕ್ಷ್ಯವನ್ನು ಒಪ್ಪಿಕೊಳ್ಳಲಾಗಿದೆಯೇ ಎಂಬುದು ಪ್ರಶ್ನೆಯಾಗಿದೆ. ಪ್ರಾ.ಸಾ.1 ಮತ್ತು ಪ್ರಾ.ಸಾ.6ರ ಸಾಕ್ಷ್ಯವು, ಪ್ರಾ.ಸಾ.6ರ ಹಾಜರಾಗಿದ್ದ ಬಗ್ಗೆ ನ್ಯಾಯಾಲಯದ ನಂಬಿಕೆಯನ್ನು ಗಳಿಸಿಕೊಂಡಿದೆಯೇ ಎಂಬುದು ಪ್ರಶ್ನೆಯಾಗಿದೆ.

20. ನಂಬಲರ್ಹ ಮಾಹಿತಿಯನ್ನು ಸ್ವೀಕರಿಸಿದ ನಂತರ, ತಾನು ಮತ್ತು ಅಬಕಾರಿ ಉಪ ಆಯುಕ್ತ ಶ್ರೀ ಉಕ್ಕಡಗತ್ರಿ, ಸಿಬ್ಬಂದಿ ಮತ್ತು ಇಬ್ಬರು ಪ್ರತ್ಯೇಕ ಪಂಚರು ಎಂದರೆ, ಇಬ್ರಾಹಿಂ ಬಿರಾದಾರ್ ಮತ್ತು ರಮೇಶ್‌ರವರು 1ನೇ ಆಪಾದಿತನ ಮನೆಯ ಬಳಿ ಹೋದೆವೆಂದು ಪ್ರಾ.ಸಾ.1 ಹೇಳಿಕೆ ನೀಡಿದ್ದಾರೆ.ಅವರ ಪ್ರಕಾರ, ಆರೋಪ ಪಟ್ಟಿ ಸಾಕ್ಷಿದಾರ ಸಂ.4 ಆಗಿರುವ ಉಕ್ಕಡಗತ್ರಿಯು ಯಾದಗಿರಿಯ ಉಪ ಆಯುಕ್ತರಾಗಿದ್ದರು ಮತ್ತು ಅವರು ಸಹಿಯನ್ನು ಹಾಕಿರುವರು. ಆಪರಾಧಿಕ ಸಾಕ್ಷ್ಯ–4 (ಪ್ರಾ.ಸಾ.6) ತನ್ನ ಹೆಸರು ಉಕ್ಕಡಗತ್ರಿಯೆಂದು ಎಲ್ಲೂ ಹೇಳಿಕೆಯನ್ನು ಹೇಳಿಕೆ ನೀಡಿಲ್ಲ. ಪ್ರಾ.ಸಾ.6ರ ಹೆಸರು ಜಮ್ಮುಸಾಬ್ ನಿವೃತ್ತ ಅಬಕಾರಿ ಉಪ ಆಯುಕ್ತ ಎಂದು ತೋರಿಸಲಾಗಿದೆ. ತಾನು ಪತ್ರಾಂಕಿತ ಅಧಿಕಾರಿಯಾಗಿದ್ದರೆಂಬ ಆಧಾರದ ಮೇಲೆ ಪ್ರಾ.ಸಾ.6ರ ಬಗ್ಗೆ ಮತ್ತು ವಶಪಡಿಸಿಕೊಳ್ಳುವ ಸಮಯದಲ್ಲಿ ಹಾಜರಿರಲಿಲ್ಲವೆಂಬುದರ ಬಗ್ಗೆ ಪ್ರಾ.ಸಾ.1 ಉಲ್ಲೇಖ ಮಾಡಿಲ್ಲ. ತನ್ನ ಮುಖ್ಯ ವಿಚಾರಣೆಯಲ್ಲಿ, ಅವರು ಪ್ರಾ.ಸಾ.6ಕ್ಕೆ ನೀಡಿರುವ ಮಾಹಿತಿ ಬಗ್ಗೆ ಏನೂ ಹೇಳಿಕೆ ನೀಡಿಲ್ಲ. ಪಾಟೀ ಸವಾಲಿನಲ್ಲು ಸಹ ಆಪರಾಧಿಕ ಸಾಕ್ಷ್ಯ 4 ಯಾದಗಿರಿಯಿಂದ ಷಹಪುರದ ಕಡೆಗೆ ಹಿಂತಿರುಗುತ್ತಿದ್ದರೆಂದು ಪ್ರಾ.ಸಾ.1 ಹೇಳಿಕೆ ನೀಡಿದ್ದಾರೆ. ಅವರು, ವಶಪಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸಿರುವ ಪ್ರಾ.ಸಾ.4ರ ಬಗ್ಗೆ ನಿಶಾನೆ ಪಿ.2 ಮಹಜರಿನಲ್ಲಿ ಯಾವುದೇ ಉಲ್ಲೇಖವಿಲ್ಲವೆಂದು ನಿರ್ದಿಷ್ಟವಾಗಿ ಹೇಳಿಕೆ ನೀಡಿದ್ದಾರೆ. ವಿದ್ಯಾನಗರದಲ್ಲಿರುವ 1ನೇ ಆಪಾದಿತನ ಮನೆಯಲ್ಲಿ ದಿನಾಂಕ 11.10.2010ರಂದು ಸಾಯಂಕಾಲ 6.10 ಮತ್ತು 7.00ರ ನಡುವೆ ರಚಿಸಲಾಗಿದೆಯೆಂದು ತಿಳಿಸಿದ ಜಫ್ತಿ ಮಹಜರನ್ನು ಸ್ಕ್ಯಾನ್ ಮಾಡುವುದು ಉತ್ತಮ.

21. ಅತೀ ಎಚ್ಚರಿಕೆಯಿಂದ ನಿಶಾನೆ ಪಿ.2ನ್ನು ಪರಿಶೀಲಿಸಿದಾಗ, ಇಬ್ಬರು ಪ್ರತ್ಯೇಕ ಸಾಕ್ಷಿದಾರರು ಷಹಪುರದ ಬಸ್ ನಿಲ್ದಾಣದ ಬಳಿ ನಿಂತಿದ್ದರೆಂದು ಮತ್ತು

ನಂಬಲರ್ಹ ಮಾಹಿತಿಯನ್ನು ಸ್ವೀಕರಿಸಿದ ಹಿನ್ನಲೆಯಲ್ಲಿ ಪ್ರಾ.ಸಾ.1 ರೊಂದಿಗೆ ವಿದ್ಯಾನಗರಕ್ಕೆ ಹೋಗಲು ಅವರಿಗೆ ಮನವಿ ಮಾಡಿದರೆಂಬುದು ಕಂಡು ಬರುತ್ತದೆ. ನಿಶಾನೆ ಪಿ.2 ಮಹಜರಿಗೆ ಪ್ರಾ.ಸಾ.1, 2, 3 ಮತ್ತು 6 ಸಹಿ ಹಾಕಿದ್ದಾರೆ. ಜಫ್ತಿ ಮಾಡಿದ ಸಮಯದಲ್ಲಿ ಪ್ರಾ.ಸಾ.6 ಹಾಜರಿದ್ದರೆಂಬ ಬಗ್ಗೆ ಒಂದು ಚಿಕ್ಕ ಉಲ್ಲೇಖವೂ ಸಹ ಇಲ್ಲ ಮತ್ತು ಆಪಾದಿತ ಜಫ್ತಿಯಲ್ಲಿ ನಿಶಾನೆ ಪಿ.2ನೇ ಪುಟದಲ್ಲಿ ಕೂಡ ಪ್ರಾ.ಸಾ.6ರ ಸಹಿ ಕಂಡು ಬಂದಿಲ್ಲ. ಈ ಸಂಬಂಧದಲ್ಲಿ ಪ್ರಾ.ಸಾ.1ರ ಸಾಕ್ಷ್ಯವು ತುಂಬಾ ಸುಸಂಗತವಾಗಿದೆ.

22. 6ನೇ ಪುಟದಲ್ಲಿರುವ ತನ್ನ ಪಾಟೀ ಸವಾಲಿನಲ್ಲಿ, ನಿರ್ದಿಷ್ಟವಾಗಿ ಆಪರಾಧಿಕ ಸಾಕ್ಷ್ಯ.4 ಪತ್ರಾಂಕಿತ ಅಧಿಕಾರಿಯಾಗಿ ಹಾಜರಾಗಿದ್ದರು ಮತ್ತು ನಿಶಾನೆ ಪಿ.2 ನ್ನು ಅವರ ಸಮ್ಮುಖದಲ್ಲಿ ಬರೆಯಲಾಗಿತ್ತೆಂದು ಪ್ರಾ.ಸಾ.1 ಹೇಳಿಕೆ ನೀಡಿದ್ದಾರೆ. ನಂಬಲರ್ಹ ಮಾಹಿತಿಯನ್ನು ಸ್ವೀಕರಿಸಿದ ಕೂಡಲೇ 1ನೇ ಆಪಾದಿತನ ಮನೆಯನ್ನು ತುರ್ತಾಗಿ ದಾಳಿ ನಡೆಸುವುದನ್ನು ದೃಷ್ಠಿಯಲ್ಲಿಟ್ಟುಕೊಂಡು ಪೂರ್ವ ಶೋಧನಾ ವಾರಂಟನ್ನು ಪಡೆದುಕೊಳ್ಳಲು ಆಗದಿರುವುದಕ್ಕೆ ಸಂಬಂಧಪಟ್ಟಂತೆ ಯಾದಗಿರಿಯ ವಿಶೇಷ ನ್ಯಾಯಾಧೀಶರಿಗೆ ವರದಿ ಸಲ್ಲಿಸಿರುವುದನ್ನು ನಿಶಾನೆ ಪಿ.11 ತಿಳಿಸುತ್ತದೆ. ಆ ಸಮಯದಲ್ಲಿ ಪ್ರಾ.ಸಾ.6 ಹಾಜರಿರುವುದನ್ನು ಪ್ರಾ.ಸಾ.1 ತಿಳಿಸದಿದ್ದರೂ ಸಹ, ನಿಶಾನೆ ಪಿ.3 ದಿನಾಂಕ 12.10.2010ರಂದು ಎನ್‌ಡಿಪಿಎಸ್ ಅಧಿನಿಯಮದೊಂದಿಗೆ ವ್ಯವಹರಿಸಿದ ಮಾನ್ಯ ವಿಶೇಷ ನ್ಯಾಯಾಧೀಶ, ಯಾದಗಿರಿ ಇವರು ಸಲ್ಲಿಸಿದ ಮತ್ತೊಂದು ವರದಿಯಾಗಿದೆ. ನಿಶಾನೆ ಪಿ.3 ರಲ್ಲಿ ಸೂಚಿಸಿರುವುದು ಏನೆಂದರೆ, ದಾಳಿಯನ್ನು ಅಬಕಾರಿ ಉಪ ಆಯುಕ್ತರು ಗುಲ್ಬರ್ಗ ಮತ್ತು ಅಬಕಾರಿ ಜಂಟಿ ಆಯುಕ್ತರು, ಇವರ ಸಮ್ಮುಖದಲ್ಲಿ ಮತ್ತು ಅವರ ಸೂಚನೆ ಮೇರೆಗೆ ಅವರ ಸಿಬ್ಬಂದಿ ಮತ್ತು ಇಬ್ಬರು ಪ್ರತ್ಯೇಕ ಪಂಚರೊಂದಿಗೆ ನಡೆಸಲಾಗಿತ್ತು ಎಂಬುದಾಗಿದೆ. ಜಫ್ತಿಯ ಸಂಬಂಧದಲ್ಲಿ ಅಬಕಾರಿ ಜಂಟಿ ಆಯುಕ್ತರು ಹಾಜರಿದ್ದ ಅಥವಾ ಮಾರ್ಗದರ್ಶನದ ಬಗ್ಗೆ ಯಾವುದೇ ಉಲ್ಲೇಖವಿರುವುದಿಲ್ಲ. ನಿಶಾನೆ ಪಿ.3 ವರದಿ ಮತ್ತು ನಿಶಾನೆ ಪಿ.4 ಪ್ರ.ಮಾ.ವರದಿ ಪ್ರಕಾರ, ಅಬಕಾರಿ ಜಂಟಿ ಆಯುಕ್ತರು ಹಾಜರಿದ್ದರೆ, ಪ್ರಾ.ಸಾ.1 ಮತ್ತು ಪ್ರಾ.ಸಾ.6 ಅದರ ಬಗ್ಗೆ ಮಾತನಾಡಿರುತ್ತಿದ್ದರು. ನಿಶಾನೆ ಪಿ.3 ಮತ್ತು ಪಿ.4ರ ನಮೂನೆಯಲ್ಲಿ ದಾಖಲೆಯಲ್ಲಿರುವ ದಸ್ತಾವೇಜೀಯ

ಸಾಕ್ಷ್ಯದಲ್ಲಿ ಅಬಕಾರಿ ಜಂಟಿ ಆಯುಕ್ತರ ಹಾಜರಾತಿ ಮತ್ತು ಮಾರ್ಗದರ್ಶನದ ಬಗ್ಗೆ ಯಾವುದೇ ಉಲ್ಲೇಖ ಇರುವುದಿಲ್ಲ ಮತ್ತು ಪ್ರಾ.ಸಾ.1 ಆಗಲಿ ಅಥವಾ ಪ್ರಾ.ಸಾ.6 ಆಗಲಿ ಏನನ್ನೂ ಹೇಳಿಲ್ಲ.

23. ನಿಶಾನೆ ಪಿ.4ರಲ್ಲಿ, ಅಬಕಾರಿ ಜಂಟಿ ಆಯುಕ್ತರು ಮತ್ತು ಅಬಕಾರಿ ಉಪ ಆಯುಕ್ತರು ಗುಲ್ಬರ್ಗಾ ಇವರು ಮಾರ್ಗದರ್ಶನ ನೀಡಿದ ಬಗ್ಗೆ ಯಾವುದೇ ನಿರ್ದಿಷ್ಟ ಉಲ್ಲೇಖ ಇಲ್ಲ. ಅವರು ಅದನ್ನು ನಡೆಸಿದೆವೆಂದು ಮತ್ತು ಅವರ ಮುಂದಾಳತ್ವದಲ್ಲಿ ಶೋಧನೆಯನ್ನು ತಾನು ನಡೆಸಿದೆನೆಂದು ಸಹ ಸೂಚಿಸಲಾಗಿದೆ. ಪ್ರಾ.ಸಾ.1ರ ಅಥವಾ ಪ್ರಾ.ಸಾ.6ರ ಸಾಕ್ಷ್ಯದಲ್ಲಾಗಲಿ ಅಂಥ ಸೂಚನೆಯನ್ನು ಯಾಕೆ ಕಂಡುಬಂದಿಲ್ಲ ಎಂಬುದು ಅರ್ಥವಾಗದಂಥ ವಿಷಯವಾಗಿದೆ.ಅಧಿವಿಚಾರಣಾ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು, ಪ್ರಾ.ಸಾ.2 ಮತ್ತು 3ರ ಸಾಕ್ಷ್ಯವನ್ನು ನಿರಾಕರಿಸಲು ಸಾಧ್ಯವಿಲ್ಲವೆಂದು, ಇದರಿಂದ ಆಪಾದಿತನ ಮನೆಗೆ ಪ್ರಾ.ಸಾ.1ರೊಂದಿಗೆ ಹೋಗಿರುವುದನ್ನು ಅವರು ಒಪ್ಪಿಕೊಂಡಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೆ, ಅವರು ನಿಶಾನೆ ಪಿ.2 ರಲ್ಲಿ ತಮ್ಮ ಸಹಿ ಇರುವುದನ್ನು ಒಪ್ಪಿಕೊಂಡಿರುವರೆಂದು ಅಭಿಪ್ರಾಯಪಟ್ಟಿದ್ದಾರೆ. ಆದುದರಿಂದ ಶೋಧನೆಯು ರುಜುವಾತಾಗಿರುತ್ತದೆ. ಆದರೆ ಈ ಇಬ್ಬರು ಸಾಕ್ಷಿದಾರರು, 1ನೇ ಆಪಾದಿತನ ಮನೆಯಲ್ಲಿ ಮಾಡಲಾದ ಶೋಧನೆ ಮತ್ತು ಗಾಂಜಾ ಇದ್ದ 4 ಬ್ಯಾಗುಗಳನ್ನು ಅಭಿಗ್ರಹಣ ಮಾಡಿದ ಬಗ್ಗೆ ಸಂಪೂರ್ಣವಾಗಿ ನಿರ್ಲಕ್ಷ್ಯ ತೋರಿಸಿದ್ದಾರೆ.ಅವರು ಮುಖ್ಯ ಆಯಾಮದ ಸಂಬಂಧದಲ್ಲಿ ನಿರ್ಲಕ್ಷ್ಯತೆ ಹೊಂದಿದ್ದಾರೆ ಮತ್ತು ಅಧಿವಿಚಾರಣಾ ನ್ಯಾಯಾಲಯವು ಇದನ್ನು ಸರಿಯಾಗಿ ಪರಿಗಣಿಸಿಲ್ಲ. ಆದುದರಿಂದ ಅವರ ಸಾಕ್ಷ್ಯವನ್ನು ವಾಸ್ತವವಾಗಿ ಪರಿಗಣನೆಯಿಂದ ಬಿಟ್ಟು ಬಿಡಲಾಗಿದೆ.

24. ಈಗಾಗಲೇ ಅಭಿಪ್ರಾಯಪಡಲಾದಂತೆ, ಅಧಿನಿಯಮದ 42ನೇ ಪ್ರಕರಣದ ಆಜ್ಞಾಪಕ ಉಪಬಂಧಗಳು ಮತ್ತೊಂದು ಕಡೆ ಹೆಚ್ಚಿನ ಪರಿಣಾಮ ಬೀರಿವೆ. ಹಸಿರು ಶಾಯಿಯಲ್ಲಿ ದಸ್ತಾವೇಜಿನ ಕಡೆಯ ಪುಟದಲ್ಲಿ ಪ್ರಾ.ಸಾ.6 ಸಹಿ ಹಾಕಿರುವುದನ್ನು ಹೊರತುಪಡಿಸಿದರೆ ನಿಶಾನೆ ಪಿ.1ರಲ್ಲಿ ಉಲ್ಲೇಖ ಇಲ್ಲದಿರುವುದರ

ಹಿನ್ನೆಲೆಯಲ್ಲಿ ಆಪಾದಿತ ಜಪ್ತಿ ಸಮಯದಲ್ಲಿ ಪ್ರಾ.ಸಾ.6 ಹಾಜರಿರುವುದು ಸಂದೇಹಾಸ್ಪದವಾಗಿ ಕಂಡು ಬಂದಿದೆ.

25. ***ಕರ್ನೈಲ್ ಸಿಂಗ್*** (ಮೇಲಿನ) ಪ್ರಕರಣದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಾಂವಿಧಾನಿಕ ಪೀಠವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> "ಯಾರೇ ವ್ಯಕ್ತಿಯಿಂದ 42ನೇ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಲಾದ ಸ್ವರೂಪದ ಮಾಹಿತಿಯನ್ನು ಸ್ವೀಕರಿಸಿದ ಅಧಿಕಾರಿಯು, ಸಂಬಂಧಪಟ್ಟ ನೋಂದಣಿ ಪುಸ್ತಕದಲ್ಲಿ ಲಿಖಿತದಲ್ಲಿ ಅದನ್ನು ದಾಖಲಿಸುವುದು ಮತ್ತು ಕೂಡಲೇ 42(1)ನೇ ಪ್ರಕರಣದ (ಎ) ಯಿಂದ (ಡಿ)ಖಂಡದ ಪರಿಭಾಷೆಯಲ್ಲಿ ಕ್ರಮ ಕೈಗೊಳ್ಳುವುದನ್ನು ಮುಂದುವರಿಸುವ ಮೊದಲು ತನ್ನ ನಿಕಟ ವರಿಷ್ಠಾಧಿಕಾರಿಗೆ ಅದನ್ನು ಕಳಿಸುವುದು. ಆದರೆ, ಅಧಿಕಾರಿಯು ಗಸ್ತು ತಿರುಗುವ ಕರ್ತವ್ಯದಲ್ಲಿರಲಿ ಅಥವಾ ಇತರೆ ರೀತಿಯಲ್ಲಿ, ಚರವಾಣಿ (ಮೊಬೈಲ್)ನಲ್ಲಾಗಲಿ ಅಥವಾ ಇತರ ಸಾಧನಗಳಿಂದಾಗಲಿ, ಮತ್ತು ತಕ್ಷಣ ಕ್ರಮ ಕೈಗೊಳ್ಳುವುದಕ್ಕೆ ಸಂಬಂಧಿಸಿದ ಮಾಹಿತಿ ಕರೆಗಳ ಮೂಲಕವಾಗಲಿ ಚಲನೆಯಲ್ಲಿರುವಾಗ ಮಾಹಿತಿಯನ್ನು ಸ್ವೀಕರಿಸಿದರೆ, ಯಾವುದೇ ವಿಳಂಬವು ವಸ್ತುಗಳು ಅಥವಾ ಸಾಕ್ಷ್ಯವು ಹಾಳಾಗುವುದಕ್ಕೆ ಅಥವಾ ನಾಶವಾಗುವುದಕ್ಕೆ ಕಾರಣವಾಗಿರುತ್ತೆ. ಇದು ಅವನಿಗೆ ಮಾಹಿತಿಯನ್ನು ಲಿಖಿತದಲ್ಲಿ ತೆಗೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ ಅಥವಾ ವಾಸ್ತವಿಕವಾಗಿರುವುದಿಲ್ಲ. ಇಂಥ ಸಂದರ್ಭದಲ್ಲಿ, 42(1)ನೇ ಪ್ರಕರಣದ (ಎ) ಯಿಂದ (ಡಿ)ವರೆಗಿನ ಖಂಡಗಳ ಪ್ರಕಾರ ಅವನು ಕ್ರಮವನ್ನು ಕೈಗೊಳ್ಳಬಹುದು ಮತ್ತು ನಂತರ ಸಾಧ್ಯವಾದಷ್ಟು ಬೇಗನೆ ಮಾಹಿತಿಯನ್ನು ಲಿಖಿತದಲ್ಲಿ ದಾಖಲಿಸಿ ಮತ್ತು ಉನ್ನತಾಧಿಕಾರಿಗೆ ಅದನ್ನು ಕೂಡಲೇ ತಿಳಿಸಬಹುದು".

ಪ್ರಾ.ಸಾ.6ರಿಂದಾಗಲಿ ಅಥವಾ ಅಬಕಾರಿ ಜಂಟಿ ಆಯುಕ್ತರಿಂದಾಗಲಿ ನಂಬಲರ್ಹ ಮಾಹಿತಿಯನ್ನು ಅವನು ಸ್ವೀಕರಿಸಿದನೆಂಬುದು ಪ್ರಾ.ಸಾ.1ರ ವಿಷಯವಲ್ಲ. ಹಾಗೆ ಸ್ವೀಕರಿಸಲಾದ ಮಾಹಿತಿಯನ್ನು, ಕೂಡಲೇ ಲಿಖಿತದಲ್ಲಿ, ಆದಷ್ಟು ಬೇಗನೆ ಅಥವಾ ಅಂಥ ಮಾಹಿತಿಯನ್ನು ಸ್ವೀಕರಿಸಿದ 72 ಗಂಟೆಗಳೊಳಗೆ ನಿಕಟ ವರಿಷ್ಠ ಅಧಿಕಾರಿಗೆ ತಿಳಿಸಿದೆನೆಂಬುದನ್ನು ಅವನು ಎಲ್ಲಿಯೂ ಹೇಳಿಲ್ಲ.

26. ಮಾನ್ಯ ಎಚ್‌ಸಿಜಿಪಿಯವರು ಈ ನ್ಯಾಯಾಲಯದ ಮುಂದೆ ವಾದಿಸುವುದೇನೆಂದರೆ, ಗುಲ್ಬರ್ಗಾದ ಪ್ರಭಾರಿ ಅಬಕಾರಿ ಉಪ ಆಯುಕ್ತರು ಸಹವರ್ತಿಯಾಗಿ ಪ್ರಭಾರವನ್ನು ತೆಗೆದುಕೊಂಡಿದ್ದರಿಂದ ಎನ್‌ಡಿಪಿಎಸ್ ಅಧಿನಿಯಮದ 42(1) ಮತ್ತು (2)ನೇ ಪ್ರಕರಣದ ಉಪಬಂಧಗಳನ್ನು ಸಾಕಷ್ಟು ಅನುಸರಿಸಿಲ್ಲ ಮತ್ತು ಶೋಧನೆಯ ಸಮಯದಲ್ಲಿ ಹಾಜರಿರಲಿಲ್ಲವೆಂಬುದಾಗಿದೆ. ಪ್ರಾ.ಸಾ.6 ತಾನು ಯಾದಗಿರಿಯಿಂದ ಗುಲ್ಬರ್ಗಕ್ಕೆ ಹೋಗುತ್ತಿದ್ದಾಗ ಪ್ರಾ.ಸಾ.1 ರಿಂದ ಮಾಹಿತಿಯನ್ನು ಸ್ವೀಕರಿಸಿದೆನೆಂದು ಮತ್ತು ಷಹಪುರ ಬಸ್ ನಿಲ್ದಾಣಕ್ಕೆ ಬರಲು ಹೇಳಿದೆನೆಂದು ಮತ್ತು ಪ್ರಾ.ಸಾ.1ನ್ನು ಮತ್ತು ಇತರ ಸಾಕ್ಷಿದಾರರನ್ನು ಭೇಟಿ ಮಾಡಿದೆನೆಂದು ಹೇಳಿಕೆ ನೀಡಿದ್ದಾರೆ. ಪ್ರಾ.ಸಾ.1 ಆ ರೀತಿ ಹೇಳಿಕೆ ನೀಡಿಲ್ಲ. ಅವನು ಸ್ವತಃ ತಾನೇ ಹೇಳಿರುವುದೇನೆಂದರೆ, ಅಬಕಾರಿ ಉಪ ಆಯುಕ್ತರು ತನ್ನ ಸಿಬ್ಬಂದಿ ಮತ್ತು ಇಬ್ಬರು ಸ್ವತಂತ್ರ ಸಾಕ್ಷಿದಾರರು ಸ್ಥಳಕ್ಕೆ ಹೋದೆವೆಂದು ತಿಳಿಸಿದ್ದಾರೆ.ಅವನು ನಿಜವಾಗಿಯೂ ಪ್ರಾ.ಸಾ.6ಕ್ಕೆ ದೂರವಾಣಿಯಲ್ಲಿ ತಿಳಿಸಿದ್ದರೆ ಮತ್ತು ಅದೇ ದಿನ ಸಂಜೆ 5.30ಗಂಟೆಗೆ ಬಸ್ ನಿಲ್ದಾಣದ ಬಳಿ ಬಂದಿದ್ದರೆ, ಪ್ರಾ.ಸಾ.1 ಅದರ ಬಗ್ಗೆ ಹೇಳಿರುತ್ತಿದ್ದ.ಈ ಎದ್ದುಕಾಣುವ ಅಸಂಗತತೆಯನ್ನು ಅಧಿವಿಚಾರಣಾ ನ್ಯಾಯಾಲಯವು ವಾಸ್ತವವಾಗಿ ಕಡೆಗಣಿಸಿದೆ.

27. ಮತ್ತೊಂದು ಕಡೆ, ಅಧಿಕಾರ ವ್ಯಾಪ್ತಿಯ ವಿಶೇಷ ನ್ಯಾಯಾಧೀಶರಿಗೆ ಪ್ರಥಮ ಮಾಹಿತಿ ವರದಿಯನ್ನು ಸಲ್ಲಿಸಿದೆ. ಜಫ್ತಿ ಮಹಜರನ್ನು ದಿನಾಂಕ 11.10.2010ರಂದು ಸಂಜೆ 6.10 ಗಂಟೆ ಮತ್ತು 7 ಗಂಟೆ ನಡುವೆ ಆಪಾದಿತವಾಗಿ ರೂಪಿಸಲಾಗಿದೆ, ಆದರೆ, ನಿಶಾನೆ ಪಿ.4 ಎಂದು ಗುರುತು ಮಾಡಲಾದ ಪ್ರ.ಮಾ.ವರದಿಯನ್ನು ಮಾರನೇ ದಿನದಂದು ಬೆಳಿಗ್ಗೆ 11.30ರಲ್ಲಿ ಯಾದಗಿರಿಯ

ಅಧಿಕಾರ ವ್ಯಾಪ್ತಿಯ ವಿಶೇಷ ನ್ಯಾಯಾಧೀಶರಿಗೆ ಸಲ್ಲಿಸಲಾಗಿತ್ತು. ವರದಿಯನ್ನು ಸಲ್ಲಿಸುವಲ್ಲಿ ಅತಿಯಾದ ವಿಳಂಬವಾಗಿದೆ ಮತ್ತು ಇದನ್ನು ಸರಿಯಾಗಿ ವಿವರಿಸಿಲ್ಲ. ನಿಶಾನೆ ಪಿ.2 ಜಫ್ತಿ ಮಹಜರು ಮತ್ತು 5 ರಾಸಾಯನಿಕ ವಿಶ್ಲೇಷಕನ ನಿಶಾನೆ ಪಿ.5ರಲ್ಲಿ ಅಸಂಗತತೆ ಕಂಡು ಬಂದಿರುವ ಹಿನ್ನೆಲೆಯಲ್ಲಿ ಇದನ್ನು ನೋಡಬೇಕಾಗುತ್ತದೆ. ಜಫ್ತಿ ಮಾಡಲಾದ ಗಾಂಜಾವು ಒಣಗಿಹೋಗಿತ್ತು. ಇದರಿಂದಾಗಿ ನಿಶಾನೆ ಪಿ.5ರಲ್ಲಿ, 4 ಪ್ಯಾಕೆಟ್ಟುಗಳು ಸೊಪ್ಪು, ಕಾಂಡ ಮತ್ತು ಬೀಜಗಳನ್ನು ಒಳಗೊಂಡಿದ್ದವು ಎಂದು ಸೂಚಿಸಲಾಗಿತ್ತೆಂಬುದನ್ನು ನಿಶಾನೆ ಪಿ.2 ಪ್ರಕಟಪಡಿಸುತ್ತದೆ. ಗಾಂಜಾವನ್ನು ಒಳಗೊಂಡಿತ್ತೆಂದು ಹೇಳಲಾದ ರಾಸಾಯನಿಕ ವಿಶ್ಲೇಷಕನು 4 ಬಟ್ಟೆ ಬ್ಯಾಗುಗಳನ್ನು ಸ್ವೀಕರಿಸಿದನೆಂಬುದನ್ನು ಮತ್ತು ಅವುಗಳಿಗೆ ಮೊಹರನ್ನು ಹಾಕಲಾಗಿತ್ತೆಂಬುದನ್ನು ನಿಶಾನೆ ಪಿ.5 ಪ್ರಕಟಪಡಿಸುತ್ತದೆ.ಮಾದರಿ ಮೊಹರನ್ನು, ಅಬಕಾರಿ ಕಾವಲುಗಾರನಾಗಿ ಕಾರ್ಯ ನಿರ್ವಹಿಸುತ್ತಿರುವ ಪ್ರಾ.ಸಾ.5 ಬಸವರಾಜ್ ಎಂಬುವರ ಮೂಲಕ ಗಾಂಜಾದೊಂದಿಗೆ ಪೇಪರಿನ ಚೀಟಿಯಲ್ಲಿ ಮಾದರಿ ಮೊಹರನ್ನು ಕಳಿಸಲಾಗಿದೆ.ಈ ಸಂಬಂಧದಲ್ಲಿ, ಪ್ರಾ.ಸಾ.5 ಬಸವರಾಜ್‌ರವರ ಸಾಕ್ಷ್ಯವನ್ನು ಸ್ಕ್ಯಾನ್ ಮಾಡಬೇಕಾಗುತ್ತದೆ.

28. ಪ್ರಾ.ಸಾ.5 ತಾನು ರಾಸಾಯನಿಕ ವಿಶ್ಲೇಷಕನಿಗೆ ಮಾದರಿ ಗಾಂಜಾವಿರುವ 4 ಪ್ಯಾಕೆಟ್ಟುಗಳನ್ನು ತೆಗೆದುಕೊಂಡನೆಂದು ಮತ್ತು ಅವುಗಳನ್ನು ನೀಡುತ್ತಿರುವಾಗ, ಅವುಗಳಿಗೆ ಅಧಿಕಾರಿಯು ಮೊಹರನ್ನು ಹಾಕಿದರೆಂದು ಹೇಳಿಕೆ ನೀಡಿದ್ದಾನೆ. 4 ಪ್ಯಾಕೆಟ್ಟುಗಳನ್ನು ಅವನಿಗೆ ನೀಡುವ ಮೊದಲು ಮೊಹರನ್ನು ಹಾಕಿದ್ದರೆ, ಈ ಪ್ಯಾಕೆಟ್ಟುಗಳಿಗೆ ಮೊಹರನ್ನು ಮಧ್ಯೆ ಹಾಕುವುದನ್ನು ತಳ್ಳಿ ಹಾಕಲು ಸಾಧ್ಯವಿಲ್ಲ. ಪ್ರಾ.ಸಾ.5ರ ಮೂಲಕ ಕಾಗದದ ಮೇಲೆ ಅದನ್ನು ಅಂಟಿಸಿರುವ ಮಾದರಿ ಮೊಹರನ್ನು ಕಳುಹಿಸದಿರುವ ಹಿನ್ನೆಲೆಯಲ್ಲಿ ಇದನ್ನು ನೋಡಬೇಕಾಗುತ್ತದೆ ಮತ್ತು ಅದನ್ನು ತೆರೆಯುವ ಮೊದಲು ರಾಸಾಯನಿಕ ವಿಶ್ಲೇಷಕನು ಸದರಿ ಮಾದರಿ ಮೊಹರನ್ನು ಪರಿಶೀಲಿಸಬೇಕು. ಇದು ಗಂಭೀರವಾದ ಲೋಪಯುಕ್ತ ಭಾಗವಾಗಿದ್ದು ಇದು ವ್ಯಾಪಕ ವಾದವಾಗಿದೆ ಮತ್ತು ಪ್ರಾಸಿಕ್ಯೂಷನ್‌ಗೆ ಇದು ಅನಾನುಕೂಲಕರವಾದುದಾಗಿದೆ.

29. 2ನೇ ಆಪಾದಿತನಿಗೆ ಸೇರಿದ 1–1–60/19ರ ಸಂಖ್ಯೆ ಇರುವ ಮನೆಯೆಂದು ತೋರಿಸಿರುವ ಷಹಪುರದ ಪುರಸಭಾ ಮುಖ್ಯಾಧಿಕಾರಿಯು ನೀಡಿದ ಪ್ರಮಾಣಪತ್ರವಾಗಿದೆಯೆಂಬುದನ್ನು ನಿಶಾನೆ ಪಿ.7 ತೋರಿಸುತ್ತದೆ. ಸಂಬಂಧಪಟ್ಟ ರಿಜಿಸ್ಟರಿನಲ್ಲಿ ಕಂಡುಬಂದಿರುವ ಈ ಮಾಹಿತಿಯನ್ನು ನಿಶಾನೆ ಪಿ.7ರಲ್ಲಿ ಮಾಹಿತಿ ಒದಗಿಸಿಲ್ಲ. ನಿಶಾನೆ ಪಿ.7ರ ಕರ್ತನನ್ನೂ ಸಹ ಪರಿಶೀಲನೆ ಮಾಡಿಲ್ಲ. ಹೆಚ್ಚಿನ ತನಿಖೆಯನ್ನು ನಡೆಸಿರುವ ಪ್ರಾ.ಸಾ.4 ಅನಿಲ್‌ಕುಮಾರನು, ತಾನು ಪುರಸಭೆಯ ಮುಖ್ಯ ಅಧಿಕಾರಿಯಿಂದ ನಿಶಾನೆ ಪಿ.7ನ್ನು ಪಡೆದುಕೊಂಡೆನೆಂದು ಮತ್ತು 2ನೇ ಆಪಾದಿತನು 1ನೇ ಆಪಾದಿತನ ತಂದೆಯೆಂದು ಮತ್ತು ಅವರು ಒಟ್ಟಿಗೆ ವಾಸಿಸುತ್ತಿದ್ದರೆಂಬುದು ತಿಳಿದುಬಂತೆಂದು ಹೇಳಿಕೆ ನೀಡಿದ್ದಾರೆ. ಅವರಿಬ್ಬರೂ ಒಟ್ಟಿಗೆ ವಾಸಿಸುತ್ತಿದ್ದರೆ ಮತ್ತು 2ನೇ ಆಪಾದಿತನ ಮನೆಯಲ್ಲಿ ಕಳ್ಳಮಾಲು ಕಂಡುಬಂದಿದ್ದರೆ, 2ನೇ ಆಪಾದಿತನನ್ನು ಖುಲಾಸೆ ಮಾಡಿರುವುದಕ್ಕೆ ಪ್ರತಿಯಾಗಿ ಪ್ರಾಸಿಕ್ಯೂಷನ್ ಯಾಕೆ ಯಾವುದೇ ಅಪೀಲನ್ನು ಸಲ್ಲಿಸಿಲ್ಲವೆಂಬುದರ ಬಗ್ಗೆ ತಿಳಿದುಬರುವುದಿಲ್ಲ.

30. ಪ್ರಾ.ಸಾ.4, ತನ್ನ ಪಾಟೀ ಸವಾಲಿನಲ್ಲಿ, 1–1–60/19 ಸಂಖ್ಯೆಯಿರುವ ಮನೆಯನ್ನು 16 ಹಿಸ್ಸಾಗಳಲ್ಲಿ (ಭಾಗಗಳಾಗಿ) ವಿಂಗಡಿಸಲಾಗಿದೆಯೆಂದು ಮತ್ತು ತಾನು ಸ್ವತ್ತಿನ ರಿಜಿಸ್ಟರಿನ ಪ್ರತಿಯನ್ನು ಕೇಳಿಲ್ಲವೆಂದು ಹೇಳಿಕೆ ನೀಡಿದ್ದಾನೆ. ಅವನು ಸದರಿ ಮನೆಯಲ್ಲಿ ಇತರ ವ್ಯಕ್ತಿಗಳು ವಾಸವಿರಬಹುದೆಂಬುದನ್ನು ಒಪ್ಪಿಕೊಂಡಿದ್ದಾನೆ. 2ನೇ ಆಪಾದಿತನು ಮಕ್ಕಳನ್ನು ಹೊಂದಿದ್ದನೇ ಮತ್ತು ಅವರ ಮನೆಯಲ್ಲಿ ಇದ್ದರೇ ಎಂಬ ಬಗ್ಗೆ ಯಾವುದೇ ವಿಚಾರಣೆಯನ್ನು ಅವರು ಮಾಡಿಲ್ಲ. ಇದನ್ನು ಗಂಭೀರವಾಗಿ ಅಲ್ಲಗಳೆದಿರುವುದರ ಹಿನ್ನಲೆಯಲ್ಲಿ ನಿಶಾನೆ ಪಿ.7ರಲ್ಲಿ ಅಪಾರವಾದ ನಂಬಿಕೆಯನ್ನು ಇಡಲು ಸಾಧ್ಯವಾಗುವುದಿಲ್ಲ. ಈ ಸಂದರ್ಭದಲ್ಲಿ ನಿಶಾನೆ ಪಿ.7ರ ಕರ್ತನನ್ನು ಪರಿಶೀಲನೆ ಮಾಡುವುದು ಅತ್ಯಗತ್ಯವಾಗಿತ್ತು.

31. ಪಾಟೀ ಸವಾಲನ್ನು ನಡೆಸುವ ಅವಧಿಯಲ್ಲಿ, ಪ್ರಾ.ಸಾ.1 ಗಾಂಜಾವಿರುವ ಎರಡು ಪ್ಯಾಕೆಟ್ಟುಗಳಿಗೆ ಸಂಬಂಧಿಸಿದ ವಿಷಯದಲ್ಲಿ ಅಭಿಮುಖವಾಗಿದ್ದಾರೆ. ಅದರ ಸಂಭವನೀಯ ತೂಕದ ಬಗ್ಗೆ ಕೇಳಿದಾಗ ಅವರು ಇದು 1.00 ಮತ್ತು

1.5 ಕಿ.ಗ್ರಾಂ. ನಡುವೆ ಇರಬಹುದೆಂದು ಹೇಳಿಕೆ ನೀಡಿದ್ದಾರೆ. ನಿಶಾನೆ ಪಿ.2ರಲ್ಲಿ ಕಂಡು ಬಂದ ಪ್ರಮಾಣದಲ್ಲಿ ಇಳಿಕೆಯಾಗಿರುವುದರ ಸಂಬಂಧದಲ್ಲಿ ಅವನು ನೀಡಿದ ಕಾರಣವೇನೆಂದರೆ, ಜಪ್ತಿ ಮಾಡಿದ ಸಂದರ್ಭದಲ್ಲಿ, ಗಾಂಜಾವು ಇನ್ನೂ ಒದ್ದೆಯಾಗಿತ್ತು. ಸಾಗಿಸುವ ಸಮಯ ಮತ್ತು ಗಾಂಜಾ ಒಣಗಿರುವ ಕಾರಣದಿಂದ ಇಳಿಕೆಯಾಗಿರಬಹುದು ಎಂಬುದಾಗಿದೆ. ಇದಲ್ಲದೆ, ಪ್ರಾ.ಸಾ.6, ಜಮ್ಮುಸಾಬ್, ತಾನು 1ನೇ ಆಪಾದಿತನ ಮನೆಯಲ್ಲಿ ಬ್ಯಾಗನ್ನು ತೆರೆದ ನಂತರ ಒಣಗಿದ ಗಾಂಜಾ ಕಂಡುಬಂತೆಂದು ಹೇಳಿಕೆ ನೀಡಿದ್ದಾನೆ.

32. ಪ್ರಾ.ಸಾ.6ರ ಇರುವಿಕೆ ಕೂಡ ತನ್ನ ಬಾಯಿಂದ ಹೇಳಿದ ಕೆಲವು ಉಪಯುಕ್ತ ಒಪ್ಪಿತ ಹೇಳಿಕೆಗಳ ಹಿನ್ನೆಲೆಯಲ್ಲಿ ಸಂಶಯ ಕಂಡುಬರುತ್ತದೆ. ಪ್ರಾ.ಸಾ.6 ತಾನು ಸ್ವೀಕರಿಸಿದ ಮಾಹಿತಿಯನ್ನು ದೂರವಾಣಿ ಮೂಲಕ ತನ್ನ ಉನ್ನತ ಅಧಿಕಾರಿಗೆ ಸೂಚಿಸಿದ್ದೆನೆಂದು ಹೇಳಿಕೆ ನೀಡಿದ್ದಾನೆ. ಆ ಕುರಿತ ದಾಖಲೆ ಸಂಬಂಧ ಯಾವುದೇ ಸಾಕ್ಷ್ಯವನ್ನು ಹಾಜರುಪಡಿಸಿಲ್ಲ. ಪ್ರಾ.ಸಾ.1 ಮಾಹಿತಿಯನ್ನು ಸ್ವೀಕರಿಸಿದ ನಂತರ ದಾಳಿಯನ್ನು ನಡೆಸಿದ್ದರೆ, ಪ್ರಾ.ಸಾ.6 ಉನ್ನತ ಅಧಿಕಾರಿಗೆ ತಿಳಿಸುವ ಅಗತ್ಯವಿರಲಿಲ್ಲ. ಅಲ್ಲದೆ ಅವರು ತನ್ನ ಚರವಾಣಿ ಮೂಲಕ ಮಾಹಿತಿಯನ್ನು ಸ್ವೀಕರಿಸಿದ ಅಂದಾಜು ಮಾಡಲಾದ ಸಮಯವನ್ನು ಹೇಳಲು ಸಾಧ್ಯವಿಲ್ಲವೆಂದು ಹೇಳಿಕೆ ನೀಡಿದ್ದಾರೆ. ಅವರು, ತಾನು ಮಾಹಿತಿಯನ್ನು ಸ್ವೀಕರಿಸಿದಾಗ ಷಹಪುರದಿಂದ 1–2 ಕಿ.ಮೀಟರುಗಳ ಅಂತರದಲ್ಲಿದ್ದೆನೆಂದು ಹೇಳಿಕೆ ನೀಡಿದ್ದಾರೆ. ಅವರು ತನಿಖಾಧಿಕಾರಿಗೆ ವಿವರಗಳ ಬಗ್ಗೆ ಯಾವುದೇ ಮಾಹಿತಿಯನ್ನು ನೀಡಿರಲಿಲ್ಲ. ಆದುದರಿಂದ ಯಾದಗಿರಿಯಿಂದ ಗುಲ್ಬರ್ಗಕ್ಕೆ ಹೋಗುವಾಗ ಪ್ರಾ.ಸಾ.1ಕ್ಕೆ ನೀಡಿದ ಮಾಹಿತಿಯನ್ನು ಸ್ವೀಕರಿಸಿದ ಬಗ್ಗೆ ಅವನು ತಪ್ಪಾಗಿ ತನಗೆ ಹೇಳಿಕೆ ನೀಡಿರುವನೆಂದು ನಿರ್ದಿಷ್ಟ ಸಲಹೆಯನ್ನು ಅವರಿಗೆ ನೀಡಲಾಗಿತ್ತು.

33. ಮಾನ್ಯ ನ್ಯಾಯಾಧೀಶರು ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದ ಮೇರೆಗೆ ಇಬ್ಬರೂ ಆಪಾದಿತರನ್ನು ವಿಚಾರಣೆ ಮಾಡಿದ್ದಾರೆ. ಆಪಾದಿತ ಶೋಧನೆಯನ್ನು

ಮನೆಯಲ್ಲಿ ನಡೆಸಿದಾಗ 2ನೇ ಆಪಾದಿತನು ಇದ್ದನೆಂಬುದು ಪ್ರಾಸಿಕ್ಯೂಷನ್‌ನ ವಾದವಾಗಿಲ್ಲ. 1ನೇ ಆಪಾದಿತನಿಗೆ ಕೇಳಲಾದ ಪ್ರಶ್ನೆಗಳನ್ನು 2ನೇ ಸಂಖ್ಯೆ ಆಪಾದಿತನಿಗೂ ಪುನಃ ಕೇಳಲಾಗಿದೆ ಮತ್ತು ಯಾವುದೇ ರೀತಿಯಲ್ಲು ಸುಸಂಗತವಾಗಿಲ್ಲ. ಅವನು ಜಪ್ತಿಯ ಸಮಯದಲ್ಲಿ ಹಾಜರಿದ್ದುದರಿಂದ 2ನೇ ಆಪಾದಿತನನ್ನು ವಿಚಾರಣೆ ಮಾಡಲಾಗಿದೆ. ಪ್ರಾಸಿಕ್ಯೂಷನ್‌ನ ವಾದವು ಗಂಭೀರವಾದ ಕಾನೂನು ಅಸಮ್ಮತತೆಯಿಂದ ಮತ್ತು ವಾಸ್ತವಿಕ ದೌರ್ಬಲ್ಯತೆಯಿಂದ ಕೂಡಿದೆ ಮತ್ತು ಅಧಿವಿಚಾರಣಾ ನ್ಯಾಯಾಲಯವು ಅವುಗಳನ್ನು ನಿರ್ಲಕ್ಷ್ಯ ಮಾಡಿದೆ.

34. ಮಾನ್ಯ ನ್ಯಾಯಾಧೀಶರೂ ಕೂಡ, ರಾಸಾಯನಿಕ ವಿಶ್ಲೇಷಕನಿಗೆ ಮಾದರಿ ಗಾಂಜಾವನ್ನು ಕಳುಹಿಸುವುದರಲ್ಲಿ ಆಗಿರುವ ಅತಿಯಾದ ವಿಳಂಬವನ್ನು ಕಡೆಗಣಿಸಿದ್ದಾರೆ. ಮಾದರಿಯ ಗುಣಲಕ್ಷಣವನ್ನು ಬದಲಾಯಿಸಲು ಸಾಧ್ಯವಿಲ್ಲ ಮತ್ತು ಅದನ್ನು ಕಳುಹಿಸುವಲ್ಲಿ ಆದ ಅತಿಯಾದ ವಿಳಂಬದ ಕಾರಣದಿಂದ ಆಪಾದಿತನ ಪೂರ್ವಾಗ್ರಹಕ್ಕೆ ಕಾರಣವಾಗಿರುವುದಿಲ್ಲ ಎಂದು ಅಭಿಪ್ರಾಯಪಟ್ಟಿದೆ.ಈ ನ್ಯಾಯಾಲಯವು ಅದನ್ನು ಒಪ್ಪಿಕೊಳ್ಳುವುದಿಲ್ಲ. ಪ್ರಾ.ಸಾ.1ಕ್ಕೆ ವಿರುದ್ಧವಾದ ಎರಡು ಪ್ಯಾಕೆಟ್ಟುಗಳಲ್ಲಿ ಕಂಡು ಬಂದ ಗಾಂಜಾದ ತೂಕದ ಹಿನ್ನೆಲೆಯಲ್ಲಿ ಈ ಪ್ಯಾಕೆಟ್ಟುಗಳನ್ನು ತಂದಿರುವುದನ್ನು ತಳ್ಳಿ ಹಾಕಲು ಆಗುವುದಿಲ್ಲ. ಗಂಭೀರವಾದ ಕಾನೂನು ದೌರ್ಬಲ್ಯಗಳ ಮತ್ತು ವಾಸ್ತವಿಕ ಅಸಂಗತತೆಗಳ ಹಿನ್ನೆಲೆಯಲ್ಲಿ ಪ್ರಾಸಿಕ್ಯೂಷನ್ನು, ಎಲ್ಲಾ ಸಂಶಯಗಳನ್ನು ಮೀರಿ ಆಪಾದಿತನ ಅಪರಾಧವನ್ನು ರುಜುವಾತುಪಡಿಸಲು ಸಾಧ್ಯವಾಗಿಲ್ಲವೆಂಬುದನ್ನು ತೋರಿಸುವುದು ಸಾಕಾಗುತ್ತದೆ. ತದನುಸಾರವಾಗಿ ವಿವಾದಾಂಶ ಸಂ.1ಕ್ಕೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ. ಈ ವಿಷಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಅಪೀಲನ್ನು ಅಂಗೀಕರಿಸಬೇಕಾಗುತ್ತದೆ ಮತ್ತು ಅಪರಾಧ ನಿರ್ಣಯದ ತೀರ್ಪು ಮತ್ತು ಶಿಕ್ಷೆಯನ್ನು ವಿಧಿಸುವುದನ್ನು ತಳ್ಳಿಹಾಕಬೇಕಾಗುತ್ತದೆ.

35. ಇದರ ಪರಿಣಾಮವಾಗಿ, ಈ ಮುಂದಿನ ಆದೇಶವನ್ನು ಹೊರಡಿಸಲಾಗಿದೆ.

## ಆದೇಶ

ಅಪೀಲನ್ನು ಅಂಗೀಕರಿಸಲಾಗಿದೆ.ಅಪರಾಧ ನಿರ್ಣಯದ ತೀರ್ಪು ಮತ್ತು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಯಾದಗಿರಿ ಇವರು ನೀಡಿದ ಶಿಕ್ಷೆಯನ್ನು ತಳ್ಳಿ ಹಾಕಲಾಗಿದೆ ಮತ್ತು ಅವರ ವಿರುದ್ಧ ವಿಧಿಸಲಾದ ಎಲ್ಲಾ ಆರೋಪಗಳನ್ನು ಖುಲಾಸೆಗೊಳಿಸಲಾಗಿದೆ.ಇತರ ಯಾವುದೇ ಪ್ರಕರಣದಲ್ಲಿ ಅವನನ್ನು ಅಗತ್ಯಪಡಿಸಿರದಿದ್ದರೆ ಅವನನ್ನು ಕೂಡಲೇ ಬಿಡುಗಡೆ ಮಾಡತಕ್ಕದ್ದು.